# ಕಲ್ಯಾಣ ಕಿರಣ

ಜನವರಿ 1995

ಬೆಲೆ ೩ ರೂ.



ಶರಣರ ಬರವೆಮಗೆ ಪ್ರಾಣ ಜೀವಾಳ

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

## ಸಂಕಲ್ಪ ಗೀತೆ

**ಷಟ್ಕೋನ ಬಸವ ಧ್ವಜಾರೋಹಣಕ್ಕೆ ಮೊದಲು ಹಾಡುವ ಗೀತೆ**

ಕರ್ತನ ಸೃಷ್ಟಿಯೊಳ್ ಹುಟ್ಟಿಹ ನಾನು
ಕರ್ತಗೆ ನಿಷ್ಠೆಯಿಂ ವಂದಿಪೆನು || ಪ ||

ಬಸವನ ಸ್ಮರಿಸಿ ಲೋಕದ ಲೇಸಿಗೆ
ಪೂಜೆಯ ತೊಟ್ಟು ದುಡಿಯುವೆನು || ಅ.ಪ. ||

ಭಕ್ತಿಯ ಜಲದೊಳು ಮೈತೊಳೆಯುವೆನು
ಜ್ಞಾನದ ವಸ್ತ್ರವ ಧರಿಸುವೆನು|
ದೀನದಲಿತರ ಸೇವೆಯ ಗೈಯಲು
ಗಂಧದೊಲ್ ಬಾಳನು ಸವೆಸುವೆನು || ೧ ||

ಮಾನವರೆಲ್ಲರು ದೇವನ ಮಕ್ಕಳು
ಎನ್ನುತ ಧ್ವಜವನು ಹಾರಿಪೆನು|
ಗುರು ಬಸವಣ್ಣನ ವಚನದ ಸೌರಭ
ಹರಡಲು ಕಂಕಣ ಕಟ್ಟುವೆನು || ೨ ||

ಧರ್ಮದ ಕವಚವ ಧರಿಸುವೆನು
ತತ್ತ್ವದ ಖಡ್ಗವ ಹಿಡಿಯುವೆನು
ಕರ್ತನ ಕಮ್ಮಟವಾದೀ ಜಗದೊಳು
ಕಲ್ಯಾಣ ರಾಜ್ಯವ ಕಟ್ಟುವೆನು || ೩ ||

**ಧ್ವಜಾರೋಹಣದ ಸನ್ನಿವೇಶದಲ್ಲಿ ಹಾಡಲಾಗುವ ಗೀತೆ**

## ಧ್ವಜಗೀತೆ

ಹೇ ಶರಣ ಬಂಧುಗಳೇ, ಬಸವ ಧ್ವಜವು ಹಾರುತಿದೆ
ಕ್ರಾಂತಿ ಕಹಳೆ ಮೊಳಗುತಿದೆ! ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ
ತೊಡೆದಿಲ್ಲ ||

ಜಾತಿಯತೆಯ ತಿಮಿರ ತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಸಮತಾ ಪತಾಕೆಯ ಬಸವ ತತ್ತ್ವದೊಡನೆ ಮೆರೆಸುತ ||
ಧರ್ಮವೆಮದು ಸದ್ಧರ್ಮ ಧರ್ಮವೆಮದು ಮಾನವಧರ್ಮ
ಧರ್ಮವೆಮದು ರಾಷ್ಟ್ರಧರ್ಮ ಧರ್ಮವೆಮದು ವಿಶ್ವಧರ್ಮ || ೧ ||

ಬಸವಾದಿ ಪ್ರಮಥರ ದಿವ್ಯ ಪರಂಪರೆಯವರು
ಮನುಕುಲದ ಸ್ವಾತಂತ್ರ್ಯಕೆ ದುಡಿವೆವೆಂಬ ಛಲದವರು ||
ಎಮ್ಮ ಬಾಳ ಕಣಕಣವು ಬಸವ ಪಾದಕರ್ಪಣ
ಎಮ್ಮ ಚೆನ್ನ ತನುಮನವು ನಾಡಗುಡಿಗೆ ತರ್ಪಣ || ೨ ||

ಜಾತಿಮತ ಪಂಥಗಳ ಕೀಳು ಭಾವ ಅಳಿಸುವಾ
ಭಿನ್ನಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುವಾ ||
ಶಾಂತಿ ಸ್ನೇಹ ಪ್ರೇಮ ಸಮತೆ ಅಂಗವಿಸಿ ಬಾಳುವಾ
ಬಸವ ಧರ್ಮ ಪ್ರಣತೆಯುರಿಗೆ ಬಾಳ ತೈಲವೆರೆಯುವಾ || ೩ ||

ರಚನೆ: ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

|| ಓಂ ಶ್ರೀಗುರು ಬಸವಲಿಂಗಾಯನಮಃ||

## ಶರಣ ಮೇಳಕ್ಕೆ ಸ್ವಾಗತ

ಬನ್ನಿ ಬನ್ನಿ ನೋಡಬನ್ನಿ ಸಂಗಮದ ಕ್ಷೇತ್ರವ
ಬನ್ನಿ ಬನ್ನಿ ನೋಡಬನ್ನಿ ಶರಣ ಮೇಳವ || ಪಲ್ಲವಿ ||

ಶ್ರೀ ಸಂಗಮೇಶನ ಭವ್ಯ-ತಾಣ ಸಂಗಮ
ವಿಶ್ವಗುರು ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ
ಮಹಾಮನೆಯ ಹೊಂದಿರುವ ದಿವ್ಯ ಕ್ಷೇತ್ರ ಸಂಗಮ
ಶರಣ ಮೇಳ ನಡೆಯುತಿರುವ ಧರ್ಮಕ್ಷೇತ್ರ ಸಂಗಮ || ೧ ||

ಕಲ್ಯಾಣ ನಾಡಿನೊಳು ಅಂದು ಒಂದು ಕ್ರಾಂತಿಯಾಗಿ
ಬಸವ ಸುತರು ಚದುರಿದರು ಹತ್ತು ಹಲವು ದಿಕ್ಕಿಗೆ
ನೆಲೆಯು ಇರದ ಮಕ್ಕಳಂತೆ ಸೋತು ಬಳಲಿ ಬಾಳುತಿರೆ
ಶರಣ ಮೇಳ ತೌರ ತೋರಿ ನಲುಮೆಯಿಂದ ಕರೆಯುತಿದೆ || ೨ ||

ಬಸವ ಕ್ರಾಂತಿ ದಿವ್ಯ ದಿನದಿ ನಡೆಯುತಿದೆ ಶರಣ ಮೇಳ
ನಾಡ ಮೂಲೆ ಮೂಲೆಯಿಂದ ಸೇರುತಿದೆ ಶರಣ ಬಳಗ
ನಮ್ಮ ನಿಮ್ಮ ಬಾಳಿನ ಬನ್ನವನ್ನು ಕಳೆಯುವ
ವಚನ ಮೇಳ, ತತ್ತ್ವ ಮೇಳ, ಕಮ್ಮನೆಯ ಶರಣ ಮೇಳ || ೩ ||

ತಮಿಳುನಾಡು, ತೆಲುಗುನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬರುತಿಹರು ಸಂಗಮಕೆ
ಬಸವ ಲತೆಯು ಅರಳಿಸಿರುವ ಶರಣ ಸುಮಗಳಿವರ ನೋಡಿ
ಮಾಲೆ ಮಾಡಿ ಇಟ್ಟಿದೆ ಸಂಗಮದ ಶರಣ ಮೇಳ || ೪ ||

ರಚನೆ : ಜಗದ್ಗುರು ಮಾತೆ ಮಹಾದೇವಿ

---

ಕಪಿಲ ಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದರೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು.

- ಶಿವಯೋಗಿ ಸಿದ್ಧರಾಮೇಶ್ವರ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ
ಎಂಟನೆಯ

# ಶರಣ ಮೇಳ

1995 ನೆಯ ಜನವರಿ
12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವ ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು, ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ (ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು ಎಂಟನೆಯ ಶರಣ ಮೇಳವು 1995ನೇ ಇಸವಿಯ ಜನವರಿ 12, 13, 14 ಮತ್ತು 15ರಂದು ಏರ್ಪಾಟಾಗಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

## ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ
ಬಸವ ಮಂಟಪ, 2035
2ನೇ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು - 560 010
ದೂರವಾಣಿ : 3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587 115
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ : STD 08351-74-838

ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ
ಪ್ರಾರಂಭೋತ್ಸವ

ದಿ. 9-1-1995 ಸೋಮವಾರ ಸಮಯ : ಬೆಳಿಗ್ಗೆ 8 ಗಂಟೆ

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ
ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ

- ಶ್ರೀ ಮರುಳ ಶಂಕರದೇವರು

ಬಸವ ಧರ್ಮ ಪೀಠದ ಮಹಾಮನೆಯ ಬಸವ ಮಂಟಪದಲ್ಲಿ ಅಖಂಡ ವಚನ ಪಠಣ ಕಾರ್ಯಕ್ರಮವು ಪ್ರಾರಂಭವಾಗಲಿದ್ದು, ಒಬ್ಬೊಬ್ಬರು ಒಂದು ಗಂಟೆಯ ಕಾಲ ವಚನ ಪಠಣವನ್ನು ಮಾಡಲಿದ್ದಾರೆ. ಪ್ರತಿದಿನ ವಿಶೇಷ ಪೂಜಾನಂತರ ಬೆಳಗಿನ 6 ಗಂಟೆಗೆ ವಚನ ಪಠಣ ಆರಂಭವಾಗಿ ರಾತ್ರಿ 10ರ ವರೆಗೆ ನಡೆಯುವುದು. ಈ ರೀತಿ ಪಠಣ ಕಾರ್ಯಕ್ರಮವು ಒಂದು ವಾರ ಕಾಲ ನಡೆಯಲಿದ್ದು ಸೋಮವಾರ ದಿ.16-1-1995 ರಂದು ಬೆಳಿಗ್ಗೆ 8 ಗಂಟೆಗೆ ಮಂಗಲಗೊಳ್ಳಲಿದೆ. ವಚನ ಪಠಣದ ಮಧ್ಯೆ ಶ್ರೀ ಗುರು ಬಸವಲಿಂಗ ಮಂತ್ರ ಪಠಣವೂ ವಿಶೇಷ ಪೂಜೆಯೊಡನೆ ಆಗಾಗ ನಡೆಯುತ್ತದೆ.

ದಿ. 9-1-95 ರಂದು ಬೆಳಿಗ್ಗೆ 8 ಗಂಟೆಗೆ ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರಾದ ಪೂಜ್ಯ ಶ್ರೀಮನ್ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಪ್ರಥಮವಾಗಿ ಪಠಣವನ್ನು ಮಾಡಿ, ಸಪ್ತಾಹವನ್ನು ಉದ್ಘಾಟಿಸುವರು. ಮಹಾತೀರ್ಥವನ್ನು ಅಂದು ಸಿದ್ಧಪಡಿಸುತ್ತಿದ್ದು, ಕರುಣ ಪ್ರಸಾದವನ್ನು ಎಲ್ಲರಿಗೂ ವಿತರಿಸಲಾಗುವುದು.

### ಶರಣ ಬಂಧುಗಳಿಗೆ ಸೂಚನೆ

**ನಿಯಮ** : ಸ್ನಾನ ಮಾಡಿ, ಮಡಿವಸ್ತ್ರಗಳನ್ನುಟ್ಟು, ಅಲ್ಲಿ ಒದಗಿಸುವ ವಿಶೇಷ ಮೇಲು ವಸ್ತ್ರವನ್ನು ಹೊದ್ದು ಪಠಣ ಮಾಡಬೇಕು. ವಚನ ಪಠಣವನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ರೂಪಿಸಿಕೊಳ್ಳಬೇಕು. ಇದಕ್ಕೆ ನೆರವಾಗುವಂತೆ 'ವಚನ ಸಂಗಮ' ಕನ್ನಡ ಪುಸ್ತಕವು ಕನ್ನಡ, ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ ಭಾವಾರ್ಥ ಸಹಿತವಾಗಿ ಲಭ್ಯವಿರುತ್ತದೆ.

## ಶರಣ ಮಂಟಪ

ಶರಣರ ಭಾವಚಿತ್ರ ಮಳಿಗೆಯ ಉದ್ಘಾಟನೆ ಬೆಳಿಗ್ಗೆ 10-30

ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಶರಣರ ಪರಂಪರೆಯು ಸಾಗಿ ಬಂದಿದ್ದು, ಆದರ್ಶಮಯ ಬದುಕನ್ನು ಬಾಳಿರುವ ಶರಣರ ಸುಂದರ ತೈಲವರ್ಣ ಚಿತ್ರಗಳ ಪ್ರದರ್ಶನವನ್ನು ಮಹಾಮನೆ ಮಹಾಮಠದಲ್ಲಿ ಏರ್ಪಡಿಸಲಾಗಿದ್ದು, ಈ ಶರಣ ಮಂಟಪದ ಉದ್ಘಾಟನೆಯನ್ನು

ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮಿಗಳು
ಮಂಗಲಮಠ, ಶಿರಗುಪ್ಪಿ

ಇವರು ನೆರವೇರಿಸಲಿದ್ದಾರೆ.

# ಶರಣ ಮೇಳ - ಬಸವ ಧರ್ಮ ಸಂಸತ್ ಸಭೆ

ದಿ. 12-1-1995, ಗುರುವಾರ ಚಿಂತನಗೋಷ್ಠಿ ಬೆಳಿಗ್ಗೆ 10 ಗಂಟೆ.

ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾ ಸ್ವಾಮೀಜಿ
ಅವರ ದಿವ್ಯ ಸನ್ನಿಧಿಯಲ್ಲಿ

| | | |
|---|---|---|
| ಬಸವ ಧ್ವಜಾರೋಹಣ | : | ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮೀಜಿ |
| ಅಧ್ಯಕ್ಷತೆ | : | ಶರಣ. ಕುಮಾರ ಕಕ್ಕಯ್ಯ ಪೋಳ, ಬಿಜಾಪುರ |
| ಸಭಾಪತಿ | : | ಶರಣ. ಎನ್. ಪುಟ್ಟರುದ್ರಪ್ಪ, ಬೆಂಗಳೂರು |
| ಉದ್ಘಾಟನೆ | : | ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರು |
| ಮುಖ್ಯ ಅತಿಥಿ | : | ಶರಣ ಡಾ|| ಎಸ್.ಆರ್. ಗುಂಜಾಳ್, ಗುಲಬರ್ಗಾ |
| ಮುಖ್ಯ ಉಪನ್ಯಾಸಕಿ | : | ಶರಣೆ ಡಾ|| ಗಂಗಮ್ಮ ಸತ್ಯಂಪೇಟೆ, ಶಹಾಪುರ |
| ವಿಷಯ | : | "ಮಹಾಚೈತ್ರ" ನಾಟಕ ಕೃತಿಯ ಒಳಹೊರಗು |
| ಪ್ರಸ್ತಾವನೆ | : | ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ |
| | : | ಶರಣ ಡಾ|| ಶಿವಗೌಡ ಪಾಟೀಲ, ಸಂಕೇಶ್ವರ |
| | | ಶರಣ ಸುಭಾಷ್ ಪಾಟೀಲ, ಹೈದರಾಬಾದ |
| | | ಶರಣ ಸಿ.ಎಂ. ಚಂದ್ರಶೇಖರ್, ಹಾಸನ |
| ಚಿಂತನ-ಮಂಥನ | : | ಶರಣ - ಶರಣೆಯರಿಂದ |
| ಸಭಾ ನಿರ್ವಹಣೆ | : | ಶರಣೆ ಗಂಗಾಂಬಿಕಾ ಪಾಟೀಲ, ಬೀದರ |

ಸದಸ್ಯರ ಹಾಜರಿ ತೆಗೆದುಕೊಂಡ ಬಳಿಕ ಬಸವ ಧರ್ಮ ಸಂಸತ್‌ಗೆ ನೂತನ ಸದಸ್ಯರ ಆಯ್ಕೆ;
ಚರ್ಚಾಗೋಷ್ಠಿ ಆರಂಭ.
ವಿ.ಸೂ : ಮರೆಯದೆ ಕೊರಳ ಪದಕ ಹಾಕಿಕೊಂಡು ಬರಬೇಕು.

## ಚರ್ಚಿಸಲಾಗುವ ವಿಷಯಗಳು

೧. ಮಹಾಚೈತ್ರ ಪುಸ್ತಕದ ಪ್ರಮಾದ ಪೂರ್ಣ ದೋಷಗಳು. ಧರ್ಮ-ಪರಂಪರೆಗಳ ಮೇಲೆ ಕೆಲವು ಸಾಹಿತಿಗಳ ಅನಿಯಂತ್ರಿತ ದೌರ್ಜನ್ಯ. ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಆಯ್ಕೆ ಸಮಿತಿಯ ಹೊಣೆಗೇಡಿತನ.

೨. ಶರಣ ಸಾಹಿತ್ಯ ಅಧ್ಯಯನ ಸಮಿತಿಯ ರಚನೆ, ಶರಣ ಸಾಹಿತ್ಯ ಪರಿಶೀಲನಾ ಸಮಿತಿ ರಚನೆ, ಅವಿವೇಕದ ಸ್ವೇಚ್ಛಾ ಬರಹಗಳಿಗೆ ಕಡಿವಾಣ

೩. ವಿಶ್ವವಿದ್ಯಾಲಯಗಳಲ್ಲಿ ದಾನಿಗಳು ಅಧ್ಯಯನ ಪೀಠಗಳನ್ನು ಆರಂಭಿಸುವ ಔಚಿತ್ಯ- ಅವುಗಳ ಫಲಶ್ರುತಿ.

೪. ಬಸವ ಧರ್ಮದ ಮೂರನೆಯ ಸಮ್ಮೇಳನ. ಎಂದು, ಎಲ್ಲಿ?

೫. ಸಮಾಜ ಸಂಘಟನೆ ಮತ್ತು ಸಂಸ್ಕಾರ

೬. ಬಸವ ತತ್ತ್ವ ಪರೀಕ್ಷೆಗಳು

೭ ಕಲ್ಯಾಣ ಕಿರಣ, ಬಸವ ಕಿರಣಗಳ ಪ್ರಸಾರ ವರ್ಧನೆ

ಸತ್ಕಾರ : ಮಹಾಚೈತ್ರ ಪುಸ್ತಕದ ಲೋಪ-ದೋಷಗಳನ್ನು ಬಸವ ಧರ್ಮಪೀಠದ ಗಮನಕ್ಕೆ ತಂದು ಚಳುವಳಿಗೆ ಕಾರಣರಾದ ವಿದ್ಯಾರ್ಥಿಗಳಾದ

೧. ಶರಣ. ಶಿವಕುಮಾರ ಬಂಡೋಳಿ, ಎಲ್.ವಿ.ಡಿ. ಕಾಲೇಜ್, ರಾಯಚೂರು

೨. ಶರಣೆ. ಟಿ. ಮಂಗಳಗೌರಿ, ಶ್ರೀಮುರುಘರಾಜೇಂದ್ರ ಕಾಲೇಜ್, ಚಿತ್ರದುರ್ಗ

## ಸಮ್ಮುಖ

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ, ಧಾರವಾಡ
ಪೂಜ್ಯ ಶ್ರೀ ಸದ್ಗುರು ವಿಜಯಕುಮಾರ ಸ್ವಾಮಿಗಳು, ಮೀರಜ
ಪೂಜ್ಯ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು, ವಿರಕ್ತಮಠ, ತೇರದಾಳ
ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು, ಕೂಡಲಸಂಗಮ
ಪೂಜ್ಯ ಶ್ರೀ ಮಹಾನಂದಾ ತಾಯಿ ಹಿರೇಮಠ, ಮುಗಳಿ
ಪೂಜ್ಯ ಶ್ರೀ ಬಸಮ್ಮತಾಯಿ, ಗುಲಬರ್ಗಾ

## ಶರಣರುಗಳಾದ :

ಡಾ|| ನಿತೀನ ಚಂದ್ರ ಹತ್ತೀಕಾಳ, ಧಾರವಾಡ
ಬಸವಕುಮಾರ ಪಾಟೀಲ, ಬೀದರ್
ಎಸ್.ಎಸ್. ಹಿರಂಡಗಿ, ಬಿಜಾಪುರ
ಆರ್.ಸಿ. ಸದಾಶಿವನ್, ಸಕಲೇಶಪುರ
ಬಸವರಾಜ ಲುಕ್, ಬಾಗಲಕೋಟೆ
ಬಸವರಾಜ ಮಡಿವಾಳರ, ಆಲಮಟ್ಟಿ
ಹೆಚ್.ಎಸ್. ಬಸವರಾಜ, ಭದ್ರಾವತಿ
ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಡಾ|| ಶಿವಗೌಡ ಪಾಟೀಲ, ಸಂಕೇಶ್ವರ
ಬಾಣೂರು ಚನ್ನಪ್ಪ, ಅಜ್ಜಂಪುರ
ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
ಚಂದ್ರಶೇಖರಪ್ಪ ಕರವೀರಶೆಟ್ಟರು ಹುಬ್ಬಳ್ಳಿ
ಎಸ್.ಬಿ. ಸುಲ್ತಾನಪುರಿ, ಬೆಳಗಾಂವ
ಮುನಿನಾರಾಯಣಪ್ಪ, ವಿಜಯಪುರ
ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಸರೋಜಮ್ಮ ಎಂ. ನಾಗರಾಜು, ಮೈಸೂರು
ವಿರೂಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ನಿಜಲಿಂಗಪ್ಪ ಹೊಳಿ, ಬಿಜಾಪುರ
ಬಿ.ವಿ. ಹಂಪನಗೌಡರು, ಬಿಜಾಪುರ
ಶಿವಶಂಕರ್ ನಾಗಪ್ಪ ಕಾಡಾದಿ, ಸೊಲ್ಲಾಪುರ
ಬಿ.ಎಂ. ರುದ್ರಶೆಟ್ಟಿ ಹಾಸನ
ಈಶ್ವರಯ್ಯ, ವೀ.ಮ.ಸ. ಅನಂತಪುರ
ಸು. ಸದಾಶಿವಪ್ಪ, ಟಿ. ನರಸೀಪುರ
ಎಂ. ನಂಜಪ್ಪ, ಕೆ. ಆರ್. ಪೇಟೆ
ಎಸ್. ಲಿಂಗಣ್ಣ, ಚಿತ್ರದುರ್ಗ
ವೀರಣ್ಣ ದೇಸಾಯಿ, ಧಾರವಾಡ
ಎಸ್.ಎನ್. ಚಂದ್ರಣ್ಣ, ಚಿತ್ರದುರ್ಗ
ಗುರುಲಿಂಗಮೂರ್ತಿ, ಬೆಂಗಳೂರು
ಬಾಲಚಂದ್ರ ಚೆನ್ನಿ, ಮಹಾಲಿಂಗಪುರ
ಚಂದ್ರಶೇಖರಪ್ಪ ಯರನಾಳ, ಇಳಕಲ್
ವಿಶ್ವನಾಥ ಡೋಣೂರು, ಶಹಾಪುರ
ಜಿ.ಜಿ. ಪಾಟೀಲ್, ಕೂಡಲಸಂಗಮ
ಆರ್.ಎಸ್. ಹೊನ್ನಪ್ಪನವರು, ಧಾರವಾಡ
ಎಂ.ಬಿ. ಪಾಟೀಲ, ಗದಗ
ಎಂ. ಜಯದೇವ, ವಿಜಯಪುರ
ಜಿ.ವಿ. ನಂಜುಂಡಸ್ವಾಮಿ, ಬೀಚಗಾನಹಳ್ಳಿ
ಕೊಂಡಜ್ಜಿ ಬಸಪ್ಪ, ಬೆಂಗಳೂರು
ಎಂ.ಎಂ. ಹುಂಡೇಕಾರ, ಬಿಜಾಪುರ
ಎಲ್. ಗುರುಸ್ವಾಮಿ, ಬೆಂಗಳೂರು
ಸಿದ್ದರಾಮಪ್ಪ ಬಾಳಪ್ಪಗೋಳ್, ಗುಲ್ಬರ್ಗಾ
ಜಿ. ಚನ್ನಯ್ಯ, ಚಳ್ಳಕೆರೆ
ಸಿ. ಬಸವರಾಜು, ತುಮಕೂರು
ಬಸವರಾಜಪ್ಪ ನಾಡಗೌಡ, ಗಣಜಲಿ
ಬಾಣೂರು ಹಿರಣಯ್ಯ, ತರೀಕೆರೆ
ಚನ್ನಬಸಪ್ಪ, ಬೀಚಗಾನಹಳ್ಳಿ
ಕೂಡಲಸಂಗಮ ಉಮರಾಣಿ, ಐಗಳಿ
ಆರ್. ಮಲ್ಲಿಕಾರ್ಜುನಪ್ಪ, ಬಾಗೇಪಲ್ಲಿ
ಡಿ.ಎಸ್. ವಿಜಯಕುಮಾರ್, ಶಿವಮೊಗ್ಗ
ಲಿಂಗರಾಜು ಇಂಗಳಳ್ಳಿ, ಹುಬ್ಬಳ್ಳಿ
ರಾಮಚಂದ್ರಪ್ಪ, ಚಿತ್ರದುರ್ಗ
ಜೈರಾಜ್ ವಕೀಲರು, ಬೆಂಗಳೂರು
ಟಿ.ಎ. ದಾಸಪ್ಪ, ತಿಪಟೂರು
ಜಿ. ಶಾಂತಯ್ಯ, ಗನ್ನಾಯ್ಯನಹಳ್ಳಿ
ಬಸವರಾಜು, ತಿಮ್ಮಪ್ಪಯ್ಯನಹಳ್ಳಿ
ಶ್ರೀವೀರೇಂದ್ರ ಪಾಟೀಲ, ಬೆಳಗಾಂವ
ವಿರುಪಾಕ್ಷಪ್ಪ ಅಂಗಡಿ, ಬೆಳಗಾಂವ
ಡಾ|| ಅಡಿವೆಪ್ಪ ಕಡಕೋಳು, ಗೋಕಾಕ
ಡಾ|| ಚಂದ್ರಶೇಖರ್ ಪಟ್ಟಣಶೆಟ್ಟಿ, ಗೋಕಾಕ
ವಿರುಪಾಕ್ಷಪ್ಪ ಯಡ್ರಾಮಿ, ಬೆಳಗಾಂವ
ಎನ್.ಜಿ. ಬಸವರಾಜಪ್ಪ, ಶಿರಗುಪ್ಪ
ಜಿ.ಬಿ. ಹಳ್ಯಾಳ, ಗದಗ
ಜಿ.ಕೆ. ಹೆರಕಲ್, ಗದಗ
ಲಿಂಗಬಸಪ್ಪ, ಅಂಗಡಿ, ರಾಯಚೂರು
ಮಹಾರುದ್ರಗೌಡ ಪಾಟೀಲ, ಗೋಕಾಕ
ಡಿ.ಆರ್. ಪಾಟೀಲ, ಗೋಕಾಕ
ಎಸ್.ಕೆ. ಪಾಟೀಲ, ಗೋಕಾಕ
ಶರಣಪ್ಪಗೌಡ. ರಾಯಚೂರು
ಚಂದ್ರಮೌಳಿ ಪಾಟೀಲ್, ರಾಯಚೂರು
ಎಸ್.ಆರ್. ನರೇಗಲ್, ಗದಗ
ಶಂಕರಪ್ಪ, ತಡಸ, ಗದಗ
ಬೀರಳ್ಳಿ, ರಾಮರೆಡ್ಡಿ, ಶಿರಗುಪ್ಪ
ಪ್ರೊ. ಎಸ್.ವಿ. ಸಂಕನೂರು, ಗದಗ

## ಇನ್ನಿತರ ಬಸವ ಧರ್ಮ ಸಂಸತ್ ಸದಸ್ಯರು

ರಾಷ್ಟ್ರೀಯ ಬಸವ ದಳಗಳ ಸಂಘಟಕರು, ಸಂಚಾಲಕರು, ಸದಸ್ಯರೂ ಆದ ಶರಣ - ಶರಣೆಯರು.

## ಬಸವ ಧರ್ಮದ ಮಹಾಜಗದ್ಗುರು ಪೀಠದ

## ಮೂರನೆಯ ವಾರ್ಷಿಕೋತ್ಸವ

ಬಸವಶಕೆ 889<br>ಗುರುವಾರ, ದಿ. 12-1-1995

ವೇಳೆ : ಸಂಜೆ 5 ಗಂಟೆ<br>ಮಹಾಮನೆ ಮಹಾಮಠ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ<br>
ಬಸವನ ಮುದ್ರೆ ಮೆರೆದಾವು | ಧರೆಯವಗೆ<br>
ವಶವಾಗದಿಹುದೆ ಸರ್ವಜ್ಞ ||

ಧರ್ಮಪಿತ ಶ್ರೀ ಗುರುಬಸವ ತಂದೆಯ ದಿವ್ಯ ಪ್ರೇರಣೆಯಂತೆ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಬಸವ ಶಕೆ 886, ಸೋಮವಾರ13-1-1992ರಂದು ಸಂಸ್ಥಾಪನೆ ಮಾಡಲಾಯಿತು. ಇದರ ಉದ್ದೇಶ, ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ ವರ್ಣ ವರ್ಗ ಲಿಂಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು.

ಇಂತಹ ಧರ್ಮಪೀಠವನ್ನು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು, ಬಸವ ಯುಗ ನಿರ್ಮಾಪಕರೂ ಆದ

**ಪೂಜ್ಯ ಶ್ರೀಮನ್ ನಿರಂಜನ**<br>**ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು**

ಪ್ರಥಮ ಪೀಠಾಧೀಶರಾಗಿ ಆರೋಹಣ ಮಾಡಿದ್ದು, ಈ ಪೀಠಾರೋಹಣದ ವಾರ್ಷಿಕೋತ್ಸವವನ್ನು12-1-1995ರಂದು ಆಚರಿಸಲಾಗುತ್ತಿದೆ.

| | | |
|---|---|---|
| **ಸಮ್ಮುಖ** | : | ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮೀಜಿ (ಮಂಗಲಮಠ, ಶಿರಗುಪ್ಪಿ) |
| | | ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ (ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ) |
| | | ಪೂಜ್ಯ ಶ್ರೀ ಸದ್ಗುರು ವಿಜಯಕುಮಾರ ಸ್ವಾಮಿಗಳು (ರುದ್ರ ಪಶುಪತಿ ಮಠ, ಮೀರಜ) |
| | | ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರು (ಹಿರೇಮಠ ಸಂಸ್ಥಾನ, ಭಾಲ್ಕಿ) |
| | | ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು (ಬಸವ ಧರ್ಮಪೀಠ, ಕೂಡಲಸಂಗಮ) |
| **ಅತಿಥಿಗಳು** | : | ಶರಣ ಸಿ.ಎಸ್. ಅಪ್ಪಾಜಿ ನಾಡಗೌಡರು (ಮಾಜಿ ಸಚಿವರು ಮುದ್ದೇಬಿಹಾಳ) |
| **ಅಧ್ಯಕ್ಷತೆ** | : | ಶರಣ ಬಿ.ಎಸ್. ಪಾಟೀಲ, ಮನಗೂಳಿ (ಮಾಜಿ ಸಚಿವರು, ಶಾಸಕರು) |



## ಗೌರವಾರ್ಪಣೆ

ಶರಣ. ರಾವ್ ಸಾಹೇಬ ಬಾಪೂಸಾಹೇಬ ಕಿತ್ತೂರ್‌ಕರ್, ಗಡಹಿಂಗ್ಲಾಜು<br>
ಶರಣ. ಶಂಕರಪ್ಪ ಮಹಾಂತಗೋಳ, ಗುಲಬರ್ಗಾ<br>
ಶರಣ. ಸುಭಾಷ್ ಪಾಟೀಲ, ಹೈದರಾಬಾದ<br>
ಶರಣ. ರಾಜಶೇಖರ್ ಮಡಕಿ, ಸೊಲ್ಲಾಪುರ<br>
ಶರಣ. ಆರ್. ಚಂದ್ರಶೇಖರ, ನೀಲಗಿರಿ<br>
ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಈಚಲಕರಂಜಿ

ಪೂಜ್ಯ ಶ್ರೀ ಮಹಾಜಗದ್ಗುರು ಸನ್ನಿಧಿಯವರಿಗೆ ಮಾಲಾರ್ಪಣೆ- ವಿವಿಧ ಗಣ್ಯರಿಂದ, ರಾಷ್ಟ್ರೀಯ ಬಸವ ದಳಗಳಿಂದ, ವಿವಿಧ ಶರಣಬಂಧುಗಳಿಂದ.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ ಸತ್ಕಾರ.

೧. ವ್ಯಾಪಾರ-ಸಮಾಜ ಸೇವೆ<br>**ಶರಣ. ಜಿ.ಜಿ. ದೊಡ್ಡವಾಡ, ಧಾರವಾಡ**

೨. ಕಲಾ ಕ್ಷೇತ್ರ - ನಾಟಕರಂಗ<br>**ಶರಣ. ಏಣಗಿ ಬಾಳಪ್ಪ, ಏಣಗಿ**

೩. ಧನ ದಾಸೋಹ<br>**ಶರಣ. ಎಂ. ನಾಗರಾಜು, ಮೈಸೂರು**

೪. ಯೋಗವಿದ್ಯಾ ಪ್ರಸಾರ<br>**ಶರಣ. ಆರ್.ಎಸ್. ಗುರುಬಸವಣ್ಣನವರು, ಗದಗ**

೫. ಸಂಗೀತ-ಆಶು ಕವಿತ್ವ<br>**ಶರಣ. ತಾಳಕೇರಿ ಬಸವರಾಜ ಗವಾಯಿಗಳು, ತಾಳಕೇರಿ**

೬. ವೈದ್ಯಕೀಯ ಕ್ಷೇತ್ರ-ಪ್ರಕೃತಿ ಚಿಕಿತ್ಸಾ ಪದ್ಧತಿ<br>**ಶರಣ. ಡಾ|| ವೈ. ರುದ್ರಪ್ಪ, ಧರ್ಮಸ್ಥಳ**

೭. ಸಾಹಿತ್ಯ-ಅನುವಾದ<br>**ಶರಣ. ಡಾ|| ಶಾಂತಾರಾಮ ಸುಣಟಣಕರ, ಬೆಳಗಾಂವ**

೮. ಪರ್ವತ ಚಾರಣ<br>**ಶರಣೆ. ಅನ್ನಪೂರ್ಣ ಕರುವಿನಕೊಪ್ಪ, ಮೈಸೂರು**

೯. ಹೋಮಿಯೋಪತಿ ವೈದ್ಯಕೀಯ<br>**ಶರಣ. ಡಾ|| ಮಹಾದೇವಪ್ಪ ವಾಲಂಡೀಕರ, ಧಾರವಾಡ**

೧೦. ಧನ ದಾಸೋಹ<br>**ಶರಣ. ಮಲ್ಲಪ್ಪ ರಾಮಪ್ಪ ನೇವಡೆ, ಗಡಹಿಂಗ್ಲಾಜ್**

**ವಿಶೇಷ ಮಾಹಿತಿ :**

- ಶರಣ. ಹೂವಿನ ಮಲ್ಲಿಕಾರ್ಜುನಪ್ಪ ಚಳ್ಳಕೆರೆ, ಇವರು ಹೂವಿನ ಅಂಗಡಿಯನ್ನು ತೆರೆಯಲಿದ್ದು, ಮಾಲೆಗಳು ಲಭ್ಯವಿಯುತ್ತವೆ.
- ಮಾಲಾರ್ಪಣೆ ಮಾಡುವವರು ಮೊದಲೇ ಹೆಸರನ್ನು ಕಾರ್ಯಕರ್ತರ ಬಳಿ ಕೊಡಬೇಕು.

## ನುಡಿ ಕಾಣಿಕೆ ಸಮರ್ಪಣೆ

೧. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
೨. ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮೀಜಿ
೩. ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು
೪. ಶರಣ. ಡಾ|| ನಿತೀನ ಚಂದ್ರ ಹತ್ತೀಕಾಳ, ಧಾರವಾಡ
೫. ಶರಣೆ. ಶಶಿಕಲಾ ತಾಯಿ ರಾಜಶೇಖರ ಮಡಕಿ, ಸೊಲ್ಲಾಪುರ
೬. ಶರಣೆ. ಸಿಂಧುತಾಯಿ ಶಿವಶಂಕರ ಕಾಡಾದಿ, ಸೊಲ್ಲಾಪುರ
೭ ಶರಣ. ಕರಿಬಸಪ್ಪ ಕೋರಿಶೆಟ್ಟರ, ಬೆಳಗಾಲಪೇಟೆ

ಪುಸ್ತಕ ಬಿಡುಗಡೆ : ಪೂಜ್ಯ ಮಹಾಜಗದ್ಗುರುಗಳಿಂದ
ಪುಸ್ತಕ : ವಿಶ್ವೇಶ್ವರ ವಚನ ಮಾಣಿಕ್ಯ – : ೧
(ಲೇಖಕ : ಗಂಜೀಹಾಲ ವಿಶ್ವೇಶ್ವರ)

### ಉಪಸ್ಥಿತರಿರುವ ಗಣ್ಯರು :

ಶರಣ. ಎ.ಎಂ. ಬಸವೇಗೌಡರು, ಚಿಕ್ಕಮಗಳೂರು
ಶರಣ. ಶಿವಶಂಕರ ನಾಗಪ್ಪ ಕಾಡಾದಿ, ಸೊಲ್ಲಾಪುರ
ಶರಣ. ವೀರಂತಪ್ಪ ನಾಗಪ್ಪ ಕಾಡಾದಿ, ಸೊಲ್ಲಾಪುರ
ಶರಣ. ಮಹಾರುದ್ರಗೌಡ ಪಾಟೀಲ, ಗೋಕಾಕ
ಶರಣ. ಕೆ. ವೀರಭದ್ರಪ್ಪ, ಚಳ್ಳಕೆರೆ
ಶರಣ. ಕೆ. ರಾಜಶೇಖರಪ್ಪ, ಚಳ್ಳಕೆರೆ
ಶರಣ. ಎಸ್. ಶರಣಪ್ಪ, ಚಳ್ಳಕೆರೆ
ಶರಣ. ಆರ್.ಬಿ. ಹೆಬ್ಬಳ್ಳಿ, ಬಾಂಬೆ
ಶರಣ. ಪ್ರಕಾಶ್ ರಾಜಶೇಖರ್ ಮಹಾಜನ, ಅಥಣಿ
ಶರಣ. ಎಸ್. ಪುಟ್ಟಸಿದ್ದಪ್ಪ, ಬೆಂಗಳೂರು
ಶರಣ. ವಿರುಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ಶರಣ. ಡಾ|| ಆರ್.ಬಿ. ಕಾಲತಿಪ್ಪಿ, ತೇರದಾಳ
ಶರಣ. ಜೆ. ರಾಜು, ಸಕಲಟ್ಟಿ, ತಮಿಳುನಾಡು
ಶರಣ. ಡಾ|| ಎಂ.ಎಸ್. ಮಾಲಂಗ್, ಉಮರ್ಗಾ
ಶರಣ. ಡಾ|| ಅಶೋಕ್ ವಿಳಾಪುರೆ, ಉಮರ್ಗಾ
ಶರಣ. ಸಿದ್ಧರಾಮಯ್ಯಸ್ವಾಮಿ, ಉಮರ್ಗಾ

ಸಭಾ ನಿರ್ವಹಣೆ : ಶರಣ. ನಿಜಗುಣಾನಂದ ಸ್ವಾಮಿ, ಬೆಂಗಳೂರು

### ದಾಸೋಹಿಗಳಿಗೆ ಸತ್ಕಾರ

ಬಸವ ಧರ್ಮಪೀಠದ ಕಟ್ಟಡ ನಿಧಿ, ಶರಣಮೇಳ ಉತ್ಸವ, ಪುಸ್ತಕ ಪ್ರಕಟಣೆ, ಮುಂತಾದುವಕ್ಕೆ 5001-00 ರೂ ಮತ್ತು ಮೇಲೆ ಕೊಟ್ಟವರಿಗೆ ಸತ್ಕಾರವಿರುತ್ತದೆ. ಈ ಪಟ್ಟಿಯು ಬಹುದೊಡ್ಡದಿರುವುದರಿಂದ ಪ್ರತ್ಯೇಕವಾಗಿ ಕಲ್ಯಾಣ ಕಿರಣ ಡಿಸೆಂಬರ್ ಸಂಚಿಕೆಯಲ್ಲಿ ಮುದ್ರಣಗೊಂಡಿದೆ. ಇತ್ತೀಚೆಗೆ ಕೊಟ್ಟವರು.

ಶರಣ. ಬಿ.ಎಸ್. ಓಂಕಾರಸ್ವಾಮಿ, ಬೆಂಗಳೂರು
ಶರಣೆ. ಶಕುಂತಲಾ ಪುಟ್ಟಸಿದ್ಧಪ್ಪ, ಬೆಂಗಳೂರು
ಶರಣೆ. ಛಾಯಾ ಜಯರಾಜ್, ಬೆಂಗಳೂರು

## ಶ್ರೀ ಬಸವೇಶ್ವರ ಪೂಜಾವ್ರತ - ದಿ. 13-1-1995

### ಮಂಗಳ ಶ್ಲೋಕ

ಜಯ ಬಸವರಾಜ ಭಕ್ತಜನ ಸುರಭೂಜ
ಜಯತು ಮಹಕಾರಣಿಕ ಪರಶಿವನ ನಿಜ ತೇಜ
ಜಯತು ಕರುಣಾಸಿಂಧು ಭಜಕಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀಗುರು ಬಸವ||

ಗುರು-ಲಿಂಗ-ಜಂಗಮ ಈ ತ್ರಿತತ್ವಗಳು ಬಸವ ಧರ್ಮದಲ್ಲಿ ಪೂಜಾರ್ಹ ವಸ್ತುಗಳು. ಇವುಗಳನ್ನು ತನು - ವಾಕ್-ಮನಗಳೆಂಬ ತ್ರಿಕರಣಗಳಿಂದ ಪೂಜಿಸಿ, ಪ್ರಾರ್ಥಿಸಿ, ಧ್ಯಾನಿಸಬೇಕು. ತ್ರಿಕರಣಾತ್ಮಕವಾಗಿ ಪೂಜಿಸುವ ವಿಧಾನವನ್ನು ಶರಣ ಮೇಳದ ಅವಧಿಯಲ್ಲಿ ಕಲಿಸಲಾಗುವುದು. ಶುಕ್ರವಾರ ದಿ. 13-1-1995ರಂದು ಬೆಳಗ್ಗೆ 7-30ಕ್ಕೆ ಶ್ರೀ ಬಸವೇಶ್ವರ ಪೂಜಾವ್ರತದ ವಿಶೇಷ ಪ್ರಾತ್ಯಕ್ಷಿಕೆ ಮಹಾಮನೆ ಆವರಣದಲ್ಲಿ ಇರುವುದು. ಎಲ್ಲರೂ ತಪ್ಪದೆ ಭಾಗವಹಿಸಬೇಕು.

* * * *

### ಆರಂಭ ಸ್ತೋತ್ರ

ಶರಣ ಧರ್ಮಕ್ಕೆ ಸಂಬಂಧಪಟ್ಟ ಯಾವುದೇ ಸಮಾರಂಭದಲ್ಲೂ ಈ ಮೂರು ಪದ್ಯಗಳನ್ನು ಹಾಡಿ ಸಭೆಯನ್ನು ಪ್ರಾರಂಭಿಸಬೇಕು.

ಸೃಷ್ಟಿ ಕರ್ತನ ಸ್ಮರಣೆ :
ಈ ಮಹತ್ ಸೃಷ್ಟಿಯನು ರಚಿಸಿಹ ಮಹದೇವ
ನೀ ಮಹಾದಾತನು ಜಗದಾದಿ ಮೂಲ
ಪ್ರೇಮನಿಧಿ, ಸರ್ವಜ್ಞ, ಸರ್ವಶಕ್ತನೆ ನಿನಗೆ
ನೇಮದಲಿ ಪ್ರಥಮತಃ ಶರಣು ಸಲ್ಲಿಸುವೆ ||೧||

ಧರ್ಮಗುರು ಸ್ಮರಣೆ :
ಧರ್ಮಪಿತ ಬಸವ ಗುರು ಕರ್ಮಹರ ಶ್ರೀ ಗುರು
ಮರ್ಮವನು ತಿಳಿಸಿ ಈ ನರಜನ್ಮದಾ
ಧರ್ಮಪಥವನು ತೋರಿ ಎಮ್ಮನುದ್ಧರಿಸಿದ
ಧರ್ಮಗುರು ಬಸವಂಗೆ ಶರಣು ಸಲ್ಲಿಸುವೆ ||೨||

ಶರಣರ ಸ್ಮರಣೆ :
ಆದಿಗುರು ಬಸವಣ್ಣ ಕರುಣೆಯಿಂದೆಮಗಿತ್ತ
ಸ್ವಾದದ ಲಿಂಗವಂತ ಘನ ಧರ್ಮವ
ಮೋದದಿಂ ಅಳವಡಿಸಿ ಶಿವಯೋಗ ಮರ್ಮವನು
ವೇಧಿಸಿದ ಶರಣರಿಗೆ ಶರಣು ಸಲ್ಲಿಸುವೆ ||೩||

* * * *

ಧ್ವಜಾರೋಹಣವು ಅತ್ಯಂತ ಮಹತ್ವಪೂರ್ಣ ಕ್ರಿಯೆ. ಆದ್ದರಿಂದ ಎಲ್ಲ ಸಭೆ - ಸಮಾರಂಭಗಳು ಆರಂಭವಾಗುವ ಮೊದಲು ಈ ಧಾರ್ಮಿಕ ವಿಧಿಯನ್ನು ನೆರವೇರಿಸಬೇಕು. ಕೈ ಮುಗಿದು 'ಶರಣು' ಎಂಬ ಭಂಗಿಯಲ್ಲಿ ನಿಂತು ಧ್ವಜ ವಂದನೆ ಮಾಡಬೇಕು.

### ಬಸವ ಧ್ವಜಾರೋಹಣ

ದಿ. 13-1-1995 ಸುಪ್ರಭಾತದ 9-50ಕ್ಕೆ

ಪೂಜ್ಯ ಶ್ರೀ ನಿ ಪ್ರ. ಮಹಾಂತ ಶಿವಯೋಗಿಗಳು
(ಚಿತ್ತರಗಿ ಸಂಸ್ಥಾನ ಮಠ, ಇಳಕಲ್)

## ಶರಣ ಮೇಳ - ಉದ್ಘಾಟನಾ ಸಮಾರಂಭ

ಶುಕ್ರವಾರ ದಿ. 13-1-1995 - ಬೆಳಿಗ್ಗೆ 10 ಗಂಟೆ

| | | |
|---|---|---|
| ದಿವ್ಯ ಸನ್ನಿಧಿ | : | ಪೂಜ್ಯ ಶ್ರೀಮನ್ ನಿರಂಜನ<br>ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು<br>(ಬಸವ ಧರ್ಮದ ಮಹಾಜಗದ್ಗುರು ಪೀಠ,<br>ಕೂಡಲಸಂಗಮ) |
| ದಿವ್ಯ ಸಮ್ಮುಖ | : | ಪೂಜ್ಯ ಶ್ರೀ ನಿ.ಪ್ರ. ಮಹಾಂತ ಸ್ವಾಮೀಜಿಯವರು<br>(ಚಿತ್ತರಗಿ ಸಂಸ್ಥಾನ ಮಠ, ಇಳಕಲ್) |
| ಉದ್ಘಾಟನೆ | : | ಶರಣ. ಹೆಚ್.ಡಿ. ದೇವೇಗೌಡರು<br>(ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ) |
| ಪ್ರಸ್ತಾವನೆ | : | ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ<br>(ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ) |
| ಅಧ್ಯಕ್ಷತೆ | : | ಶರಣ. ಜೆ.ಹೆಚ್. ಪಟೇಲ್<br>(ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ) |
| ಮುಖ್ಯ ಅತಿಥಿಗಳಿಂದ | : | ಶರಣೆ. ರಾಣಿ ಸತೀಶ್ |
| ಪುಸ್ತಕ ಬಿಡುಗಡೆ | : | (ಉಪಸಭಾಪತಿ, ವಿಧಾನ ಪರಿಷತ್ತು, ಬೆಂಗಳೂರು) |
| ಪುಸ್ತಕ | : | ವೀರ ಮಾತೆ ಅಕ್ಕನಾಗಲಾಂಬಿಕೆ |
| ನೆನಪಿನ ಕಾಣಿಕೆ | : | ಶರಣ. ಹೆಚ್. ವೈ. ಮೇಟಿ |
| ಬಿಡುಗಡೆ | : | (ಸಚಿವರು, ಅರಣ್ಯಖಾತೆ) |
| ವಿಶೇಷ ಆಹ್ವಾನಿತರು | : | ಶರಣೆ. ವಿಮಲಾಬಾಯಿ ಜೆ. ದೇಶಮುಖ<br>(ಶಾಸಕಿ, ಮುದ್ದೇಬಿಹಾಳ) |
| ಪ್ರಾರ್ಥನೆ | : | ರಾಷ್ಟ್ರೀಯ ಬಸವ ದಳ, ಬೆಂಗಳೂರು |
| ಸ್ವಾಗತ | : | ಶರಣ. ಡಾ\|\| ನಿತಿನಚಂದ್ರ, ಹತ್ತೀಕಾಳ<br>(ರಾಷ್ಟ್ರೀಯ ಬಸವದಳ, ಧಾರವಾಡ) |
| ಮಾಲಾರ್ಪಣೆ | : | ಶರಣ. ಜಿ.ಜಿ. ಪಾಟೀಲ, ಕೂಡಲ ಸಂಗಮ<br>ಶರಣ. ದಾಮೋದರ ಪ್ರಭುಲಾಲ್ ಡಾಗಾ, ಇಳಕಲ್ |
| ಶರಣು ಸಮರ್ಪಣೆ | : | ಶರಣ. ಎನ್. ಪುಟ್ಟರುದ್ರಪ್ಪ<br>ಪ್ರಧಾನ ಕಾರ್ಯದರ್ಶಿ, ಶರಣ ಮೇಳ ಉತ್ಸವ ಸಮಿತಿ |
| ಸಭಾ ನಿರ್ವಹಣೆ | : | ಶರಣ. ಬಸವ ಕುಮಾರ ಪಾಟೀಲ<br>(ರಾಷ್ಟ್ರೀಯ ಬಸವದಳ, ಬೀದರ) |

---

ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ - ಧರ್ಮಪಿತ ಬಸವಣ್ಣನವರು

## ಶರಣ ಮೇಳ - ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿ

ಶುಕ್ರವಾರ ದಿ. 13-1-1995 ಸಂಜೆ 5 ಗಂಟೆ

| | | |
|---|---|---|
| ದಿವ್ಯ ಸನ್ನಿಧಿ | : | ಪೂಜ್ಯ ಶ್ರೀಮನ್ ನಿರಂಜನ<br>ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ |
| ದಿವ್ಯಸಮ್ಮುಖ | : | ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು |
| ಅಧ್ಯಕ್ಷತೆ | : | ಶರಣ. ತಿಪ್ಪೇಸ್ವಾಮಿ<br>(ಅಬಕಾರಿ ಸಚಿವರು, ಕರ್ನಾಟಕ ಸರ್ಕಾರ) |
| ಪ್ರಸ್ತಾವನೆ | : | ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ |
| ಉದ್ಘಾಟನೆ | : | ಶರಣೆ. ಬಿ.ಟಿ. ಲಲಿತಾ ನಾಯಕ<br>(ಸಚಿವೆ. ಕನ್ನಡ-ಸಂಸ್ಕೃತಿ, ಮಹಿಳೆಯರ<br>ಮತ್ತು ಮಕ್ಕಳ ಕಲ್ಯಾಣ ಯೋಜನೆ) |
| ಪುಸ್ತಕ ಬಿಡುಗಡ | : | ಶರಣೆ ಮಾಲೂತಾಯಿ ಚಂದ್ರಕಾಂತ ಸ್ವಾಮಿ<br>ರಾಷ್ಟ್ರೀಯ ಬಸವ ದಳ, ಈಚಲಕರಂಜಿ |
| ಪುಸ್ತಕ | : | ಲಿಂಗಾಯತ ಧರ್ಮದರ್ಪಣ (ಮರಾಠಿ) |
| ಪುಸ್ತಕ ಬಿಡುಗಡೆ | : | ಶರಣ. ರಾವ್‌ಸಾಹೇಬ, ಬಾಪೂಸಾಹೇಬ ಕಿತ್ತೂರಕರ |
| ಪುಸ್ತಕ | | ವಚನ ಸಂಗಮ (ಕನ್ನಡ ಮತ್ತು ಮರಾಠಿ) |
| ವಿಶೇಷ ಆಹ್ವಾನಿತರು | : | ಶರಣ. ಶಿವಪುತ್ರಪ್ಪ ದೇಸಾಯಿ<br>(ಶಾಸಕರು, ಹೂವಿನ ಹಿಪ್ಪರಗಿ)<br>ಶರಣ. ಡಾ\|\| ಎಂ.ಪಿ. ನಾಡಗೌಡರು<br>(ವಿಧಾನ ಪರಿಷತ್ ಸದಸ್ಯರು, ಬಾಗಲಕೋಟೆ)<br>ಶರಣ. ಶ್ರೀಶೈಲಪ್ಪ ವಿ. ಬಿದನೂರು<br>(ಶಾಸಕರು, ರೋಣ)<br>ಶರಣ. ಕೆ. ಶರಣಪ್ಪ<br>(ಶಾಸಕರು, ಕುಷ್ಟಗಿ) |
| ಪ್ರಾರ್ಥನೆ | : | ಶರಣ ಕುಮಾರಿಯರು, ಧಾರವಾಡ |
| ಸ್ವಾಗತ | : | ಶರಣ. ಎನ್. ಪುಟ್ಟರುದ್ರಪ್ಪ |
| ಶರಣು ಸಮರ್ಪಣೆ | : | ಶರಣ. ಜಿ.ಬಿ. ಹಳ್ಯಾಳ, ಗದಗ |
| ಮಾಲಾರ್ಪಣೆ | : | ಶರಣ. ಜಿ.ಪಿ. ಪಾಟೀಲ, ಹುನಗುಂದ |
| ಸಭಾ ನಿರ್ವಹಣೆ | : | ಶರಣೆ. ಅನ್ನಪೂರ್ಣ ಹಂಗರಗಿ, ಬೀದರ |

---

### ವಚನಾಭಿನಯ ನೃತ್ಯ - 9 ಗಂಟೆಗೆ

ಶರಣ. ಮಂಜುನಾಥ ಶೆಟ್ಟರು, ಕರ್ನಾಟಕ ವಿಶ್ವವಿದ್ಯಾಲಯ
ಉದ್ಯೋಗಿ, ಧಾರವಾಡ ಇವರಿಂದ

ಶನಿವಾರ, ದಿ.14-1-1995

ಬಸವ ಧ್ವಜಾರೋಹಣ-ಬಸವ ಜ್ಯೋತಿ ದರ್ಶನ ಬಸವ ಧರ್ಮ ಸಂಸ್ಥಾಪನಾ ದಿನವಾದ ಸಂಕ್ರಮಣದಂದು ಮಹಾಮನೆ ಮಹಾಮಠದಲ್ಲಿ ಬೆಳಿಗ್ಗೆ 9 ಗಂಟೆಗೆ ಬಸವ ಧ್ವಜಾರೋಹಣವನ್ನು ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ನೆರವೇರಿಸಿ, ಬಸವ ಜ್ಯೋತಿ ಉದ್ದೀಪನವನ್ನು ಮಾಡುವರು.

ಸಮಸ್ತ ಶರಣ ಬಂಧುಗಳು, ಬಸವ ಜ್ಯೋತಿ ದರ್ಶನವನ್ನು ಮಾಡಿ ಗುರುವಂದನೆ ಸಲ್ಲಿಸಿ, ಪಥ ಸಂಚಲನದ ಮೂಲಕ ಮಹಾಮನೆಯ ಬಸವ ಮಂಟಪದಿಂದ ಹೊರಟು ಬಸವ ವನದಲ್ಲಿರುವ ಸಭಾ ಮಂಟಪಕ್ಕೆ ಆಗಮಿಸುವರು.

## ಶರಣ ಮೇಳ-ಸಮುದಾಯ ಪ್ರಾರ್ಥನೆ

### ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ ಮತ್ತು ಶ್ರೀ ಸಿದ್ಧರಾಮೇಶ್ವರ ಜಯಂತಿ

ಶನಿವಾರ ದಿ. 14-1-1995 ಬೆಳಿಗ್ಗೆ 10-30

ಧ್ವಜಾರೋಹಣ ಮತ್ತು ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಡಾ|| ಸಿದ್ಧಲಿಂಗ ಮಹಾಸ್ವಾಮಿಗಳು (ಜಗದ್ಗುರು ತೋಂಟದಾರ್ಯಮಠ, ಗದಗ)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ (ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ)

ಉದ್ಘಾಟನೆ : ಶರಣ. ವೈಜನಾಥ ಪಾಟೀಲರು (ಸಚಿವರು, ನಗರಾಭಿವೃದ್ಧಿ, ಕಾಡಾ, ಹೈ.ಕ.ಅ.ಮಂಡಳಿ)

ಅಧ್ಯಕ್ಷತೆ : ಶರಣ. ಎ.ಬಿ. ಪಾಟೀಲರು (ಸಚಿವರು. ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ)

ಪುಸ್ತಕ ಬಿಡುಗಡೆ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು (ಬಸವ ಧರ್ಮದ ಮಹಾಜಗದ್ಗುರು ಪೀಠ, ಕೂಡಲಸಂಗಮ)

ಪುಸ್ತಕ : ಬಸವ ಧರ್ಮದ ಸಂಸ್ಕಾರಗಳು

ಪುಸ್ತಕ ಬಿಡುಗಡೆ : ಶರಣ. ಬಿ.ಹೆಚ್. ಮಂಜುನಾಥ (ಐ.ಎ.ಎಸ್)
: (ಮಹಾವ್ಯವಸ್ಥಾಪಕರು, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ)

ಪುಸ್ತಕ ಲಿಂಗಾಯತ ಧರ್ಮ ಕೈಪಿಡಿ (ಕನ್ನಡ)

### ಸಮುದಾಯ ಪ್ರಾರ್ಥನಾ ನಿರ್ವಹಣೆ

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಬೆಂಗಳೂರು
೨. ಪೂಜ್ಯ ಶ್ರೀ ನಿ.ಪ್ರ. ಮಹಾಂತ ಸ್ವಾಮಿಗಳು, ಇಳಕಲ್
೩. ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
೪. ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಭಾಲ್ಕಿ
೫. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ, ಧಾರವಾಡ
೬. ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು, ಕೂಡಲಸಂಗಮ

---

**ವಿಶೇಷ ಆಹ್ವಾನಿತರು :**

ಶರಣ. ಬಸವರಾಜ ಪಾಟೀಲ ಅಟ್ಟೂರು, ಶಾಸಕರು, ಬಸವಕಲ್ಯಾಣ
ಶರಣ. ಎಂ.ಸಿ. ಮನಗೂಳಿ, ಶಾಸಕರು, ಸಿಂದಗಿ
ಶರಣ. ಶಿವಾನಂದ ಪಾಟೀಲ, ಶಾಸಕರು, ತಿಕೋಟಾ

## ಶರಣ ಮೇಳ - ಧರ್ಮ ಚಿಂತನಗೋಷ್ಠಿ

ಶನಿವಾರ ದಿ. 14-1-1995 ಸಂಜೆ 5 ರಿಂದ 8

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ನಿ.ಪ್ರ. ಜಗದ್ಗುರು ವಿಜಯ ಮಹಾಂತ (ಮೈಸೂರು ಸಂಸ್ಥಾನಮಠ), ಸ್ವಾಮಿಗಳು

ಸಮ್ಮುಖ : ಪೂಜ್ಯ ಶ್ರೀ ನಿ.ಪ್ರ. ವಿಜಯಕುಮಾರ ಸ್ವಾಮಿಗಳು (ರುದ್ರಪಶುಪತಿ ಮಠ, ಕೊಲ್ಹಾಪುರ-ಮೀರಜ)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಉದ್ಘಾಟನೆ : ಶರಣ. ಬಸವರಾಜ ರಾಯರೆಡ್ಡಿ (ಸಚಿವರು, ವಸತಿ ಖಾತೆ)

ಅಧ್ಯಕ್ಷತೆ : ಶರಣ. ಬಿ.ಎಸ್. ಯಡೆಯೂರಪ್ಪ, ಶಾಸಕರು ವಿರೋಧ ಪಕ್ಷದ ನಾಯಕರು (ಭಾರತೀಯ ಜನತಾಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ)

ಮುಖ್ಯ ಅತಿಥಿಗಳು : ಶರಣ. ಚಂದ್ರಕಾಂತ ಬೆಲ್ಲದ (ಶಾಸಕರು, ಧಾರವಾಡ)

ಪುಸ್ತಕ ಬಿಡುಗಡೆ : ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರು (ಹಿರೇಮಠ, ಭಾಲ್ಕಿ)

ಪುಸ್ತಕ : ದೇವಪೂಜಾ ವಿಧಾನ (ಕನ್ನಡ)

ಬಸವಣ್ಣನವರ ಭಾವಚಿತ್ರ, ಬಿಡುಗಡೆ : ಪೂಜ್ಯ ಶ್ರೀ.ನಿ.ಪ್ರ. ಶಿವಾನಂದ ಸ್ವಾಮಿಗಳು (ಶ್ರೀ ಗುರುಬಸವೇಶ್ವರ ಸಂಸ್ಥಾನ ಮಠ, ಹುಲ್ಸೂರು)

ಪುಸ್ತಕ ಬಿಡುಗಡೆ : ಪೂಜ್ಯ ಶ್ರೀ ಬಸವರಾಜ ಸ್ವಾಮಿಗಳು (ಶಿವಾನಂದ ಮಠ, ಕುಂದಗೋಳ)

ಪುಸ್ತಕ : ಹೃದಯ ವೀಣೆ ಮೀಂಟಿದಾಗ

ವಿಶೇಷ ಆಹ್ವಾನಿತರು : ಶರಣ. ಎಸ್.ಆರ್. ಪಾಟೀಲ (ಮಾಜಿ ಚೇರ್ಮನ್, ಬಿ.ಟಿ.ಡಿ.ಎ., ಬಾಗಲಕೋಟೆ)
ಶರಣ. ಜಗದೀಶ ಶೆಟ್ಟರು (ಶಾಸಕರು, ಹುಬ್ಬಳ್ಳಿ)
ಶರಣ. ಉದ್ಭನೇಶ್ವರ ಬಣಕಾರ (ಶಾಸಕರು, ಹಿರೇಕೆರೂರು)

ಸ್ವಾಗತ : ಶರಣ. ನಿಜಗುಣಾನಂದ ಸ್ವಾಮಿ

ಮಾಲಾರ್ಪಣೆ : ಶರಣ. ಬಸವರಾಜ ಕಡಪಟ್ಟಿ, ಹುನಗುಂದ

ಸಭಾ ನಿರ್ವಹಣೆ : ಶರಣ. ಡಿ.ಎಸ್. ವಿಜಯಕುಮಾರ್, ಶಿವಮೊಗ್ಗ

## ಶರಣ ಮೇಳ - ಮಕ್ಕಳ ಗೋಷ್ಠಿ

ಶನಿವಾರ ದಿ. 14-1-1995 ರಾತ್ರಿ 8

| | | |
|---|---|---|
| ಪ್ರಾರ್ಥನೆ | : | ಕುಮಾರಿ ಬಸವಶ್ರೀ |
| ಸ್ವಾಗತ | : | ಕುಮಾರಿ ಶೋಭಾ, ಕೂಡಲಸಂಗಮ |
| ಉದ್ಘಾಟನೆ | : | ಕುಮಾರಿ ವಚನ ಸುಧಾ, ಚಿತ್ರದುರ್ಗ |
| ನೃತ್ಯಾಭಿನಯ | : | ಕುಮಾರಿ ಶೃತಿ ಕೆ.ಎಂ. ಭಟ್, ಸಿದ್ಧಾಪುರ<br>ಕುಮಾರಿ ಆರತಿ ಅಡಕಿಹಾಳ, ಬಾಗಲಕೋಟ |
| ಉಪನ್ಯಾಸ | : | ಕುಮಾರಿ ಶೃತಿ ಕೆ.ಎಂ. ಭಟ್, ಸಿದ್ಧಾಪುರ<br>ಕುಮಾರಿ ಜ್ಯೋತಿ ಗಂಗಾಧರ, ಬಾಗಲಕೋಟೆ<br>ಕುಮಾರಿ ಬಸವಶ್ರೀ |
| ವಚನ ಗಾಯನ | : | ಕುಮಾರ್ ಎನ್.ಎಸ್. ಆದರ್ಶ<br>(ಪ್ರೌಢಶಾಲಾ ವಿದ್ಯಾರ್ಥಿ, ಮೈಸೂರು) |
| ಮಕ್ಕಳಿಂದ ಫ್ಯಾನ್ಸಿ ಡ್ರೆಸ್ | | |
| ನಿರ್ವಹಣೆ | : | ಶರಣೆ. ಸರೋಜಮ್ಮ ಸದಾಶಿವನಗೌಡ, ಕಲ್ಯಾಣೇಶ್ವರಿ |
| ನಿರ್ದೇಶನ | : | ಶರಣೆ. ಜಯಮ್ಮ ಚಂದ್ರಪ್ಪ |

### ಮಹತ್ವಪೂರ್ಣ ನಿರ್ಣಯ ಘೋಷಣೆ – ರಾತ್ರಿ 9 ಗಂಟೆ

ರಾಷ್ಟ್ರೀಯ ಬಸವದಳದ ಕಾರ್ಯಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮಹತ್ವಪೂರ್ಣವಾದ ಕೆಲವು ವಿಷಯಗಳನ್ನು ಪ್ರತಿಪಾದಿಸಲಿದ್ದಾರೆ. ಪ್ರಮುಖ ನಿರ್ಣಯಗಳನ್ನು ಸಂಘಟನೆ ವಿಷಯ ಕುರಿತು ಘೋಷಿಸಲಿದ್ದಾರೆ.

### ಸಾಮೂಹಿಕ ಇಷ್ಟಲಿಂಗ ಪೂಜೆ

ಭಾನುವಾರ ದಿ.15-1-1995 ಬೆಳಿಗ್ಗೆ 8 ಗಂಟೆ

ಬಸವ ತತ್ತ್ವದ ಜೀವಾಳ ಕರ್ತನ ಆರಾಧನೆ; ಸೃಷ್ಟಿಕರ್ತನನ್ನು ವಿಶ್ವದಾಕಾರದಲ್ಲಿ ಬುಳುಕಾಗಿಸಿಕೊಂಡು ಪೂಜಿಸುವುದು ಈ ಶಿವ ಪಥದ ಮುಖ್ಯ ಆಚರಣೆ. ಆದ್ದರಿಂದ ಪ್ರತಿವರ್ಷದಂತೆ ದಿ.15-1-1995 ಭಾನುವಾರದಂದು ಬೆಳಿಗ್ಗೆ 8 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪೂಜೆಯನ್ನು ತೋರಿಸುವರು. ಅವರೊಡನೆ ಉಳಿದೆಲ್ಲ ಶರಣ-ಶರಣೆಯರು ಕುಳಿತುಕೊಂಡು ಇಷ್ಟಲಿಂಗಾರ್ಚನೆ ಮಾಡಬೇಕು. ಪೂಜಾ ಪರಿಕರಗಳನ್ನು ತೆಗೆದುಕೊಂಡು ಭಾಗಿಗಳಾಗಬೇಕು. ದಿನ ನಿತ್ಯ ಮಾಡುವ ಕ್ರಿಯೆ ಎಂದು ಉದಾಸೀನ ಮಾಡಬಾರದು. ಸಾಮೂಹಿಕ ತಪಸ್ಸಿನಲ್ಲಿ ಅದ್ಭುತ ಶಕ್ತಿಯಿದೆ. ಸಾಮೂಹಿಕ ಸಂಕಲ್ಪದಲ್ಲಿಯೇ ವ್ಯಕ್ತಿ ಮತ್ತು ಸಮಾಜಗಳಿಗೆ ಅಮೂಲ್ಯ ಭವಿಷ್ಯವಿದೆ. ನಂತರ ತೀರ್ಥಪ್ರಸಾದ ವಿತರಣೆ ಇರುವುದು.

ಇಷ್ಟಲಿಂಗಪೂಜಾ ವಿಧಾನವನ್ನು ಕಲಿಸುವ ದೇವಪೂಜಾ ವಿಧಾನದ ನೂತನ ಆವೃತ್ತಿ ಸಿದ್ಧವಾಗಿದ್ದು, ಬಿಡುಗಡೆಯಾಗಿದೆ. ಪೂಜೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಈ ಪ್ರತಿ ಹೊಂದಿರಬೇಕು. ಇಷ್ಟಲಿಂಗಾರ್ಚನೆ ಕಲಿಸುವ ಆಡಿಯೋ ಕೆಸೆಟ್ಟು-ವಿಡಿಯೋ ಕೆಸೆಟ್ಟು ಎರಡೂ ಮಾರಾಟಕ್ಕೆ ಲಭ್ಯವಿರುತ್ತವೆ.

## ರಾಷ್ಟ್ರೀಯ ಬಸವ ದಳಗಳ ಎಂಟನೆಯ ಮಹಾಧಿವೇಶನ ಮತ್ತು ಶರಣ ಮೇಳ ಸಮಾರೋಪ ಸಮಾರಂಭ

ಭಾನುವಾರ ದಿ. 15-1-1995 ಬೆಳಿಗ್ಗೆ 11 ರಿಂದ 2

| | | |
|---|---|---|
| ಧ್ವಜಾರೋಹಣ | : | ಪೂಜ್ಯ ಶ್ರೀ ನಿ.ಪ್ರ. ಶಿವಲಿಂಗ ಸ್ವಾಮಿಗಳು<br>(ತಣ್ಣೀರು ಹಳ್ಳಿ ಮಠ, ಹಾಸನ) |
| ಸನ್ನಿಧಿ | : | ಪೂಜ್ಯ ಶ್ರೀಮದ್ ನಿರಂಜನ<br>ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು |
| ಸಮ್ಮುಖ | : | ಪೂಜ್ಯ ಶ್ರೀ ನಿ.ಪ್ರ. ಸಂಗಮೇಶ್ವರ ದೇವರು<br>(ಜವೇನಹಳ್ಳಿ ಮಠ, ಹಾಸನ) |
| ಅಧ್ಯಕ್ಷತೆ | : | ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು<br>(ಬಸವ ಮಂದಿರ, ಚಿಕ್ಕಮಗಳೂರು) |
| ಉದ್ಘಾಟನೆ | : | ಪೂಜ್ಯ ಶ್ರೀ ನಿ.ಪ್ರ. ಮಹಾಂತ ಸ್ವಾಮಿಗಳು<br>(ಚಿತ್ತರಗಿ ಸಂಸ್ಥಾನ ಮಠ, ಇಳಕಲ್) |
| ಪ್ರಾಸ್ತಾವಿಕ ಭಾಷಣ | : | ಶರಣ. ಬಸವ ಕುಮಾರ್ ಪಾಟೀಲ<br>(ಕಾರ್ಯಾಧ್ಯಕ್ಷರು, ರಾ.ಬ. ದಳ ರಾಜ್ಯ ಸಮಿತಿ) |
| ಉಪನ್ಯಾಸಕರು | : | ೧. ಶರಣ. ಸಿ.ಎಂ. ಚಂದ್ರಶೇಖರ<br>(ರಾಷ್ಟ್ರೀಯ ಬಸವ ದಳ, ಹಾಸನ)<br>೨. ಶರಣ ಡಾ॥ ನಿತಿನ ಚಂದ್ರ ಹತ್ತೀಕಾಳ<br>(ಗೌರವಾಧ್ಯಕ್ಷರು, ರಾ.ಬ. ದಳ ರಾಜ್ಯ ಸಮಿತಿ)<br>೩. ಶರಣ. ಎಸ್. ಲಿಂಗಣ್ಣ<br>(ರಾ.ಬ. ದಳ. ಚಿತ್ರದುರ್ಗ)<br>೪. ಶರಣ. ಸುಭಾಷ್ ಪಾಟೀಲ<br>(ರಾ.ಬ.ದಳ. ಆಂಧ್ರ ಪ್ರದೇಶ)<br>೫. ಶರಣ. ಡಿ.ಎಸ್. ವಿಜಯಕುಮಾರ್<br>(ಬಸವ ಕಿರಣ ಸಂಪಾದಕರು, ಶಿವಮೊಗ್ಗ) |
| ಸಭಾ ನಿರ್ವಹಣೆ | : | ಶರಣೆ. ಜಯಮ್ಮ ಚಂದ್ರಪ್ಪ |

### ಮಹತ್ವಪೂರ್ಣ ನಿರ್ಣಯಗಳ ಘೋಷಣೆ

| | | |
|---|---|---|
| ಮಂಡನೆ | : | ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ<br>(ಕಾರ್ಯಾಧ್ಯಕ್ಷೆ, ಬಸವ ಧರ್ಮ ಸಂಸತ್) |
| ಘೋಷಣೆ | : | ಶರಣ ಸಮುದಾಯದ ಎದುರಿಗೆ |
| ಅನುಮೋದನೆ | : | ಶರಣ ಸಮುದಾಯದಿಂದ – |

ವಿಶೇಷ ಸೂಚನೆ : ಈ ವೇದಿಕೆಯ ಮೇಲೆ ಮುಕ್ತ ಚರ್ಚೆಗೆ ಅವಕಾಶ ಇರುವುದಿಲ್ಲ ಮತ್ತು ಪ್ರಸ್ತುತ ಸಭೆಯಲ್ಲಿ ಘೋಷಿಸಲಾಗುವ ವಿಷಯಗಳನ್ನು ದಿ. 12-1-1995 ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲೇ ಚರ್ಚಿಸಲಾಗುವುದು. ಈ ಚರ್ಚಾ ಗೋಷ್ಠಿಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ಇರುವುದರಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆನ್ನುವ ಶರಣರು ಆ ಗೋಷ್ಠಿಯಲ್ಲಿ ಭಾಗವಹಿಸಬೇಕು.

### ಪ್ರವಚನ ಕಾರ್ಯಕ್ರಮ

ಮಕರ ಸಂಕ್ರಮಣ ದಿ 15-1-95 ರಂದು ಬಂದಿರುವ ಕಾರಣ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ರಾತ್ರಿ 7-30 ರಿಂದ ವಿಶೇಷ ಪ್ರವಚನ ನೀಡಲಿದ್ದಾರೆ.

## ಸಾಂಸ್ಕೃತಿಕ ಕಾರ್ಯಕ್ರಮ

1995ರ ಜನವರಿ 12 ರಿಂದ 15ರವರೆಗೆ ನಡೆಯಲಿರುವ ಶರಣ ಮೇಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವವರ ಹೆಸರು ಕೆಳಗಿನಂತಿವೆ. ಸಮಯದ ಅವಕಾಶ ನೋಡಿಕೊಂಡು ಕೊಡಲಾಗುವುದು.

೧. ಶರಣ. ದಾನಪ್ಪ ಜತ್ತಿ, ಕೀರ್ತನ-ಪುರಾಣ-ಪ್ರವಚನ ಪ್ರವೀಣರು, ತಿಕೋಟಾ

೨. ಶರಣ. ಚನ್ನವೀರ ಬನ್ನೂರು ಗವಾಯಿಗಳು, ಬಿಜಾಪುರ
ಶರಣ. ಪರಮಾನಂದ ಮಸ್ಕಿ, ಪ್ರಿನ್ಸಿಪಾಲ್, ನಾಲತ್ತವಾಡ
ಶರಣ. ಬಸವರಾಜ ಪತ್ತಾರ, ಬಿಜಾಪುರ, ಹಾರ್ಮೋನಿಯಮ್
ಶರಣ. ಮಡಿವಾಳಯ್ಯ ಮಣ್ಣೂರು, ಬಿಜಾಪುರ, ತಬಲಾ
ಇವರಿಂದ ವಚನ ಗಾಯನ

೩. ಕುಮಾರಿ ಶೃತಿ ಕೆ.ಎಂ.ಭಟ್; ಸಿದ್ಧಾಪುರ ಇವರಿಂದ ನೃತ್ಯಾಭಿನಯ ಮತ್ತು ಉಪನ್ಯಾಸ

೪. ಎನ್.ಎಸ್. ಆದರ್ಶ, ಮೈಸೂರು ಎಂಬ ಬಾಲಕನಿಂದ ವಚನ ಗಾಯನ

೫. ವಿಶ್ವೇಶ್ವರ ವಚನ ಮಾಣಿಕ್ಯ ಭಾಗ-೧ ಎಂಬ ಸದ್ಯದ ಲೇಖಕರ ವಚನ ಸಂಕಲನವೊಂದು, ದಿ.12-1-1995ರಂದು ಸಂಜೆ 5 ಗಂಟೆಗೆ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ದಿವ್ಯ ಹಸ್ತದಿಂದ ಬಿಡುಗಡೆಯಾಗಲಿದ್ದು, ಇದನ್ನು ಗಂಜೀಹಾಲದ ವಿಶ್ವೇಶ್ವರ (ಕೆ.ಕೆ. ಹಿರೇಮಠ) ಅವರು ಬರೆದಿದ್ದಾರೆ. ಮತ್ತು ಪ್ರಕಾಶಿಸಿದ್ದಾರೆ.

೬. ಶ್ರೀ ಕರುಣಾಕರ, ಶಂಕರಘಟ್ಟ, ಅವರ ಕಲಾ ತಂಡದಿಂದ ವೀರಗಾಸೆ ಅಭಿನಯ

೭. ಶ್ರೀ ಮಂಜುನಾಥ ಶೆಟ್ಟರ್, ಕರ್ನಾಟಕ ವಿಶ್ವವಿದ್ಯಾಲಯದ ಉದ್ಯೋಗಿಗಳು, ಧಾರವಾಡ ಇವರಿಂದ ವಚನಾಭಿನಯ.

೮. 15-1-1995ರ ರಾತ್ರಿ 10 ಗಂಟೆಯಿಂದ ಜಿ.ಟಿ. ಬಸವರಾಜಪ್ಪ ಗೌರಾಪುರ ಮತ್ತು ತಂಡದವರಿಂದ ಜಾನಪದ ವೀರಗಾಸೆ ಪ್ರವಚನ ನಡೆಯಲಿದೆ. [ಕೃಪೆ : ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು]

೯. ದಿ. 9-1-1995ರಿಂದ ಪ್ರತಿ ದಿವಸ ಸಂಜೆ 7 ರಿಂದ ಪ್ರವಚನ ಕಾರ್ಯಕ್ರಮವು ಮಹಾಮನೆ ಮಹಾಮಠದಲ್ಲಿ ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಸದ್ಗುರು ಬಸವಾನಂದ ಸ್ವಾಮಿಗಳಿಂದ ನಡೆಯಲಿದೆ.

೧೦. ಶ್ರೀ ಅಕ್ಕಮಹಾದೇವಿ ಬಳಗ, ಕೋರಿಗಲ್ಲಿ ಶಹಾಪುರ ಬೆಳಗಾಂವ ಇವರಿಂದ ಶರಣಸ್ತುತಿ - ಭಜನಾಕಾರ್ಯಕ್ರಮ

೧೧. ಬಿಡದಿ (ಬೆಂಗಳೂರು ಜಿಲ್ಲೆ)ಯ ರಾಷ್ಟ್ರೀಯ ಬಸವದಳದವರಿಂದ ವಚನ ಭಜನೆ.

೧೨. ಧಾರವಾಡದ ಎಸ್.ಕೆ. ಹಿರೇಮಠ, ಸಂಗೀತ ಶಿಕ್ಷಕರ ವಿದ್ಯಾರ್ಥಿ ತಂಡದಿಂದ ಪ್ರಾರ್ಥನೆ-ಮಂಗಲ-ವಚನ ಗಾಯನ

## ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು - ಮಣ್ಣು - ಇಟ್ಟಿಗೆ - ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ-ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಾಯಿ-ತಂದೆ ಬಯಸರು? ಸೃಷ್ಟಿ ಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ - ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಆದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ಸೃಷ್ಟಿ ಸಂಬಂಧಿಸಿದ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ

ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ, ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು; ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿದರು, ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹು ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದ ಗೆಡಿಸಿದ್ದನ್ನು ಕಂಡು ಕಡು ನೊಂದ ಕರ್ತನು, ನನ್ನಲ್ಲಿ ತಮ್ಮ ಅನುಗ್ರಹ ಇಳಿಸಿ, ಸಮಾಜದ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡ.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಕೂಡಲ ಸಂಗಮದೇವರ ನಿರೂಪಕ್ಕೆ ನಡೆಯಿತು.
ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು.

ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ" ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗವಂತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ವಿನಾ, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ-ವಣಕ್ಕೆ ಸೀಮಿತವಾಗದ 'ಗಣಧರ್ಮ' ವಾದ್ದರಿಂದ. ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮಾಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕೂಗಿ ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ
ಆ ಕಾಗೆ ಕೋಳಿಯಿಂದ ಕರಕಷ್ಟ ಕೂಡಲ ಸಂಗಮದೇವಾ

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ ಸಂಸ್ಕಾರಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

**ಕೌಟುಂಬಿಕ ಪ್ರಾರ್ಥನೆ** : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯ ವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟ ಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು.

ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತುಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು. ಸಾಮೂಹಿಕ ಪ್ರಾರ್ಥನೆ ಮಾಡಿರಿ.

**ವಾರದ ಪ್ರಾರ್ಥನೆ** : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿ ಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

**ಗಣ ಮೇಳ** : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತುಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟುಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೇ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮಲ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು.ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

**ಶರಣ ಮೇಳ** : ವ್ಯಕ್ತಿಯು ವೈಯುಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ' ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ

ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ. ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೫ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೆ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಂಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯು ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ - ಮಧುವಯ್ಯ ಶೀಲವಂತರು ಮಾಡಿದ ಪ್ರಾಣಾರ್ಪಣೆ ಬಲಿದಾನ ನಿಮ್ಮ ಅಂತಃ ಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನು ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೊ? ಕೂಡದು ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಬರಿಯುತ್ತಿರುತ್ತಾಳೆ. ಬನ್ನಿ; ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು, ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ, ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ-ಬಸವಣ್ಣ

(ಗ್ರಹಿಸಿದವರು : ಬಸವಾತ್ಮಜೆ ಮಾತಾಜಿ)

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

1995 ನೇ ಸಾಲಿನಲ್ಲಿ ಬರುವ ಬಸವ ಧರ್ಮೀಯರ ಹಬ್ಬ-ಹುಣ್ಣಿಮೆ-ಉತ್ಸವಗಳು

| | | |
|---|---|---|
| 1. | ಶರಣ ಮೇಳ | ಜನವರಿ 12 ರಿಂದ 15 |
| 2. | ಬಸವ ಕ್ರಾಂತಿ ದಿನ | ಜನವರಿ 14 |
| 3. | ಶ್ರೀ ಸಿದ್ಧರಾಮಯೇಶ್ವರ ಜಯಂತಿ | ಜನವರಿ 14 |
| 4. | ಗಣ ರಾಜ್ಯೋತ್ಸವ | ಜನವರಿ 26 |
| 5. | ಶರಣ ಜ್ಯೋತಿ ದರ್ಶನ, ಕೂಡಲ ಸಂಗಮ (ಮಾಘ ಪೌರ್ಣಿಮ) | ಫೆಬ್ರವರಿ 15 |
| 6. | ಚನ್ನ ಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ) ಪವಿತ್ರ ಗಣ ಭೋಜನ | ಫೆಬ್ರವರಿ 15 |
| 7. | ಗಣ ಮೇಳ ಸಮಾವೇಶ (ಮಹಾ ಶಿವರಾತ್ರಿ) ಸರ್ವಶರಣರ ದಿನಾಚರಣೆ | ಫೆಬ್ರವರಿ 27 |
| 8. | ಪೂಜ್ಯ ಮಾತಾಜಿಯವರ ವರ್ಧಂತಿ | ಮಾರ್ಚ್ 13 |
| 9. | ಕಲ್ಯಾಣ ಕ್ರಾಂತಿ ಸಂಸ್ಮರಣಾ ಪಂಚಮಿ. ಫಾಲ್ಗುಣ ದ್ವಾದಶಿಯಿಂದ ಧರ್ಮಗುರು ಬಸವಣ್ಣನವರ ಗಡಿಪಾರು | ಮಾರ್ಚ್ 14 |
| | ಹರಳಯ್ಯ-ಮಧುವರಸರ ವಿಚಾರಣೆ (ತ್ರಯೋದಶಿ) | ----"---- 15 |
| | ಹರಳಯ್ಯ-ಮಧುವರಸರ ವಧೆ (ಚತುರ್ದಶಿ) | ----"---- 16 |
| | ಬಿಜ್ಜಳನ ವಧೆ (ಹುಣ್ಣಿಮೆ) | ----"---- 17 |
| | ಸಾಹಿತ್ಯದೊಡನೆ ಚನ್ನ ಬಸವಣ್ಣನವರ ನಿರ್ಗಮನ (ಪಾಡ್ಯ) | ----"---- 18 |
| 10. | ಅಲ್ಲಮ ಪ್ರಭು ಜಯಂತಿ (ಯುಗಾದಿ ಪ್ರತಿಪದೆ) | ಏಪ್ರಿಲ್ 1 |
| 11. | ಅಕ್ಕಮಹಾದೇವಿ ಜಯಂತಿ (ಚೈತ್ರ ಹುಣ್ಣಿಮೆ) | ಏಪ್ರಿಲ್ 5 |
| 12. | ಮಡಿವಾಳ ಮಾಚಿದೇವ ಜಯಂತಿ (ಕಾಯಕ ದಿನಾಚರಣೆ) | ಮೇ 1 |
| 13. | ಬಸವ ಜಯಂತಿ | ಮೇ 2 |
| 14. | ಬಸವ ಪಂಚಮಿ | ಆಗಸ್ಟ್ 1 |
| 15. | ನೀಲಮ್ಮ ಷಷ್ಠಿ | ಆಗಸ್ಟ್ 2 |
| 16. | ಸ್ವಾತಂತ್ರ ದಿನೋತ್ಸವ | ಆಗಸ್ಟ್ 15 |
| 17. | ಪೂಜ್ಯ ಲಿಂಗಾನಂದ ಸ್ವಾಮಿಗಳ ವರ್ಧಂತಿ | ಆಗಸ್ಟ್ 29 |
| 18. | ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ | ಆಗಸ್ಟ್ 29 |
| 19. | ಬಸವ ಧರ್ಮ ವಿಜಯೋತ್ಸವ (ಅಕ್ಕ ನಾಗಲಾಂಬಿಕಾ ಸಂಸ್ಮರಣಾ ದಿನ) | ಅಕ್ಟೋಬರ್ 3 |
| 20. | ಚನ್ನಬಸವ ಜಯಂತಿ (ವಚನ ದೀಪೋತ್ಸವ) | ಅಕ್ಟೋಬರ್ 25 |
| 21. | ಕನ್ನಡ ರಾಜ್ಯೋತ್ಸವ | ನವೆಂಬರ್ 1 |
| 22. | ಚನ್ನಬಸವ ಲಿಂಗೈಕ್ಯ ದಿನ | ನವೆಂಬರ್ 7 |

## ಕೂಡಲ ಸಂಗಮದಲ್ಲಿ ಸಂದರ್ಶಿಸಬೇಕಾದ ಸ್ಥಳಗಳು

| | | |
|---|---|---|
| ಸಂಗಮೇಶ್ವರ ದೇವಾಲಯ | : | ಚಾರಿತ್ರಿಕ, ಪುರಾತನ, ಶಿವ ದೇವಾಲಯ |
| ಬಸವೇಶ್ವರ ಐಕ್ಯ ಮಂಟಪ | : | ಗುರು ಬಸವಣ್ಣನವರ ದಿವ್ಯ ಸಮಾಧಿ |
| ಬಸವ ಸಾಗರ | : | ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಿಂದ ರೂಪುಗೊಂಡಿರುವ ಸುಂದರ ಜಲರಾಶಿ. |

**ಅಖಂಡ ವಚನ ಪಠಣ ಮಂಟಪ :** ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ದಿನಾಂಕ 9-1-1995ರಿಂದ 16-1-95ರವರೆಗೆ ಅಖಂಡ ವಚನ ಪಠಣ ನಡೆಯುತ್ತಿರುವ ಮಂಟಪ ಮತ್ತು 16 ಜನ ಶರಣರ ಸುಂದರ ಮೂರ್ತಿಗಳು-ಮಂಟಪಗಳು.

**ಶ್ರೀ ಬಸವೇಶ್ವರ ಪೂಜಾಮಂಟಪ :** ಮಹಾಮನೆಯ ಆವರಣದಲ್ಲಿರುವ ಇಲ್ಲಿಗೆ ಬಂದು ಪೂಜೆ ಮಾಡಿಸಿ, ದರ್ಶನ ಪಡೆದು, ತೀರ್ಥ ಪ್ರಸಾದವನ್ನು ಪಡೆಯಿರಿ.

**ಬಸವ ಮುದ್ರೆ ಮತ್ತು ನಾಣ್ಯ :** ಪೂಜ್ಯ ಗುರು ಬಸವಣ್ಣನವರ ಚಿತ್ರ, ಷಟ್ಕೋನ, ಬಸವ ಮಂತ್ರ-ಪಾದಪೀಠ ಸಹಿತ ಇರುವ ಮುದ್ರೆಗಳು ದೊರೆಯುತ್ತವೆ.

- ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬರೆದ, ಪ್ರಕಟಿಸಿದ ಅನೇಕ ಗ್ರಂಥಗಳು ಮತ್ತು ಪ್ರವಚನಗಳ ಆಡಿಯೋ-ವಿಡಿಯೋ ಕೆಸೆಟ್ಟುಗಳು ಮಹಾಮನೆ ಮಹಾಮಠದ ಆವರಣದಲ್ಲಿ, ಶರಣ ಮೇಳ ಮಂಟಪದ ಸಮೀಪದ ಬುಕ್‌ಸ್ಟಾಲಿನಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.
- ಶರಣಮೇಳದಲ್ಲಿ ಭಾಗಿಗಳಾದವರು ಮನೆಗೆ, ಬಂಧು-ಮಿತ್ರರಿಗೆ ಪ್ರಸಾದವನ್ನಾಗಿ ಒಯ್ಯಲು ಲಾಡು (ಬೂಂದಿ) ಉಂಡೆಗಳು ಮತ್ತು ಕಲ್ಲುಸಕ್ಕರೆ ಪೊಟ್ಟಣಗಳು ಮಾರಾಟಕ್ಕೆ ಲಭ್ಯವಿರುತ್ತವೆ.
- ಬಸವಧರ್ಮಪೀಠದ ತಯಾರಿಕೆಯ ಅತ್ಯುತ್ತಮ ವಿಭೂತಿ ಗಟ್ಟಿಗಳು, ಕಂಥೆಯ ಇಷ್ಟಲಿಂಗಗಳು, ರುದ್ರಾಕ್ಷಿ ಮಾಲೆಗಳು, ಮಾರಾಟಕ್ಕೆ ದೊರೆಯುತ್ತವೆ.
- ಅತ್ಯಂತ ಸುಂದರವಾದ ಬಟ್ಟೆಯ ಮಾಲೆಗಳು ಫೋಟೋಗಳಿಗೆ ಹಾಕಲು ಸಿದ್ಧವಾಗಿ ದೊರೆಯುತ್ತವೆ.

### - ಸೂಚನೆಗಳು -

ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ಶರಣಮೇಳ ಉತ್ಸವ ಸಮಿತಿಯ ಕಾರ್ಯಾಲಯ ಮತ್ತು ಸಮಾಚಾರ ಕೇಂದ್ರಗಳಿವೆ. ಪ್ರತಿನಿಧಿಗಳು ತಮ್ಮ ತಮ್ಮ ರಸೀತಿಗಳನ್ನು ತೋರಿಸಿ ಬ್ಯಾಡ್ಜಸ್ (ಗುರುತಿನ ಚೀಟಿ), ಪ್ರಸಾದ ನಿಲಯದ ಪ್ರವೇಶ ಚೀಟಿ ಮುಂತಾದುವನ್ನು ಪಡೆಯಬೇಕು.

ಕಾಣಿಕೆ ಸಂಗ್ರಹಿಸಲು ರಸೀತಿ ಪುಸ್ತಕ ಪಡೆದವರು ತಾವು ಸಂಗ್ರಹಿಸಿದ ಕಾಣಿಕೆ ಮತ್ತು ರಸೀತಿ ಪುಸ್ತಕಗಳನ್ನು ಕಾರ್ಯಾಲಯದಲ್ಲಿ ಇರುವ ಕೋಶಾಧ್ಯಕ್ಷೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ಪುಟ್ಟರುದ್ರಪ್ಪ ಮತ್ತು ಕಲ್ಯಾಣಪ್ಪ ಪರಮಾದಿ ಅವರಿಗೆ ಒಪ್ಪಿಸಿ, ಅವರ ಸಹಿ ಇರುವ ಪಾವತಿ ಪಡೆಯಬೇಕು.

## ಕೂಡಲ ಸಂಗಮ-ಸ್ಥಳದ ಮಹತ್ವ ಮತ್ತು ನಿರ್ದೇಶನ

- ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕದಲ್ಲಿ ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಲ್ಲಿರುವ ಸುಕ್ಷೇತ್ರ
- ರಾಷ್ಟ್ರೀಯ ಹೆದ್ದಾರಿ ನಂ. 13ಕ್ಕೆ ಕೇವಲ 7 ಕಿಲೋಮೀಟರ್ ದೂರದಲ್ಲಿದೆ. ಹುನಗುಂದದಿಂದ 22 ಕಿ.ಮಿ. ಆಲಮಟ್ಟಿಯಿಂದ 30 ಕಿ.ಮಿ.
- ಹುನಗುಂದ-ಇಳಕಲ್-ಬಾಗಿಲಕೋಟೆ-ಬಿಜಾಪುರ ನಗರಗಳು ಕೂಡಲ ಸಂಗಮಕ್ಕೆ ಸನಿಹದಲ್ಲಿರುವ ಪ್ರಮುಖ ಪಟ್ಟಣಗಳು. ಈ ಸ್ಥಳಗಳಿಂದ ಕೂಡಲ ಸಂಗಮ ಕ್ಷೇತ್ರಕ್ಕೆ ಬಹಳಷ್ಟು ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ.
- ಪುರಾತನ ಶೈವ ಕ್ಷೇತ್ರವಾದ ಕೂಡಲಸಂಗಮವು 12ನೆಯ ಶತಮಾನದ ಕಾಲದಲ್ಲಿ ಅತ್ಯಂತ ವೈಭವದ ಸ್ಥಿತಿಯಲ್ಲಿದ್ದು ಪ್ರಸಿದ್ಧ ಗುರುಕುಲವನ್ನು ಹೊಂದಿತ್ತು. ಗುರುಕುಲದ ಅಧಿಪತಿಗಳಾದ ಶ್ರೀ ಜಾತವೇದ ಮುನಿಗಳು ಬಹು ಖ್ಯಾತ ಯೋಗಿಗಳಾಗಿದ್ದರು.
- ಸಮತಾವಾದಿ, ಕ್ರಾಂತಿಯೋಗಿ ಬಸವಣ್ಣನವರು ವಿದ್ಯಾರ್ಜನೆ ಮಾಡಿದ, ತಪಸ್ಸುಗೈದ, ನವಧರ್ಮ ದ್ರಷ್ಟಾರರಾದ ಮತ್ತು ಐಕ್ಯರಾದ ಸ್ಥಾನ ಕೂಡಲ ಸಂಗಮ. ಈ ದಿವ್ಯ ಸಂಗಮವು ಒಂದು ದಂಡೆಗೆ ಬಸವಣ್ಣನವರ ಐಕ್ಯ ಮಂಟಪವನ್ನು ಹೊಂದಿದೆ. ನೀಲಾಂಬಿಕಾ ತಾಯಿಯ ದಿವ್ಯ ಸಮಾಧಿಯು ಕೃಷ್ಣಾ ನದಿಯ ಇನ್ನೊಂದು ಬದಿಗೆ ತಂಗಡಗಿ ಗ್ರಾಮದ ಬಳಿ ಇದ್ದು ಅತ್ಯಂತ ಸುಂದರ ಪರಿಸರದಲ್ಲಿದೆ. ದೋಣಿಯಲ್ಲಿ ಕುಳಿತು ಪಯಣಿಸಲು ಅವಕಾಶ ಉಂಟು. ಅಥವಾ ಬಸ್ಸು-ಕಾರುಗಳ ಮೂಲಕ ಬೆಳಗಲ್ ಮಾರ್ಗವಾಗಿ ಹೋಗಬಹುದಾಗಿರುತ್ತದೆ.
- ಕೂಡಲ ಸಂಗಮಕ್ಕೆ ಹತ್ತಿರದಲ್ಲಿರುವ ಬಸವನ ಬಾಗೇವಾಡಿಯು ಶ್ರೀಗುರುಬಸವಣ್ಣನವರ ಜನ್ಮ ಸ್ಥಳ. ಹೆದ್ದಾರಿ 13ಕ್ಕೆ ಸನಿಹದಲ್ಲಿರುವ ಬಸವನ ಬಾಗೇವಾಡಿ ಸಂದರ್ಶನಾರ್ಹ ಸ್ಥಳವಾಗಿದೆ.
- ಬಸವ ಧರ್ಮಪೀಠ ಟ್ರಸ್ಟ್ ಹದಿನಾಲ್ಕೂವರೆ ಎಕರೆ ಜಮೀನನ್ನು ಖರೀದಿಸಿ ಶ್ರೀ ಬಸವೇಶ್ವರ ಪೂಜಾ ಮಂಟಪ, ಅತಿಥಿ ಗೃಹ, ಶರಣರ ಮಂಟಪಗಳು ಮುಂತಾದುವನ್ನು ನಿರ್ಮಾಣ ಮಾಡುತ್ತಲಿದೆ. ಅಕ್ಕನಾಗಲಾಂಬಿಕಾ ಶರಣಧಾಮ ಎಂಬ ಅತಿಥಿ ಗೃಹವು ಈಗ ಪೂರ್ಣಗೊಂಡಿದ್ದು, ಸರ್ವಜ್ಞ ಶರಣಧಾಮವು ಈಗ ನಿರ್ಮಾಣ ಹಂತದಲ್ಲಿದೆ.
- 1995ನೆಯ ಜನವರಿ 12, 13, 14 ಮತ್ತು 15ರಂದು ನಡೆಯಲಿರುವ ಶರಣ ಮೇಳಕ್ಕೆ ನಾಡಿನಾದ್ಯಂತದಿಂದ ಜನರು ಬರಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಕಾಂಟ್ರಾಕ್ಟ್) ವಿಶೇಷ ಬಸ್ಸುಗಳನ್ನು ವ್ಯವಸ್ಥೆ ಮಾಡಿದೆ. ಮತ್ತು ರಾಷ್ಟ್ರೀಯ ಹೆದ್ದಾರಿ 13ರ ಮೇಲೆ ಸಂಚರಿಸುವ ಬಸ್ಸುಗಳನ್ನು ನಿಲ್ಲಿಸಿ, ಮುಂದೆ ಹೋಗಲು ಸಾರಿಗೆ ಚಾಲಕರಿಗೆ ಆದೇಶ ನೀಡಿದೆ.
- ಶರಣ ಮೇಳದ ಸಮಯದಲ್ಲಿ ಬಾಗಿಲಕೋಟೆಯವರೆಗೆ ಟ್ರೇನಿನಲ್ಲಿ ಬಂದು ಕೂಡಲ ಸಂಗಮಕ್ಕೆ ಬರಲು ಸಂಪರ್ಕ ಬಸ್ಸುಗಳ ಅನುಕೂಲತೆ ಇರುವುದು.

ಓಂ ಶ್ರೀ ಗುರು ಬಸವಲಿಂಗಾಯ ನಮಃ
ಬಸವ ಧರ್ಮ ಪೀಠ (ರಿ)ದ ಆಶ್ರಯದ

# ರಾಷ್ಟ್ರೀಯ ಬಸವ ದಳ

ಮಹಾಮನೆ ಮಹಾಮಠ, ಕೂಡಲ ಸಂಗಮ-587115
ತಾ|| ಹುನಗುಂದ, ಜಿಲ್ಲೆ-ಬಿಜಾಪುರ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರು ಮಾನವ ಸಮಾಜದಲ್ಲಿ ಭಾವೈಕ್ಯತೆಯನ್ನು ತರಲಿಕ್ಕೋಸುಗವಾಗಿ ಅಪಾರವಾಗಿ ಶ್ರಮಿಸಿದರು. ಜಾತಿ-ಮತ-ವರ್ಣ-ವರ್ಗ ಭೇದಗಳನ್ನು ನಿವಾರಿಸಲು ಧರ್ಮವನ್ನೇ ಸಾಧನವಾಗಿ ಮಾಡಿಕೊಂಡರು. "ಕಾಗೆಯೊಂದಗುಳ ಕಂಡಡೆ ಕೂಗಿ ಕರೆಯದೆ ತನ್ನ ಬಳಗವೆಲ್ಲವನು? ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವನು? ಎಂದು ತಿಳಿಸಿ, ಶಿವಭಕ್ತರಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ-ಕೋಳಿಗಳಿಗಿಂತ ಕನಿಷ್ಠ" ಎಂದು ಸಂಘ ಜೀವನದ ಮಹತ್ವವನ್ನು ಸಾರಿದರು. ಧರ್ಮಪಿತರ ಈ ಆದೇಶ ಮತ್ತು ಆಶಯವನ್ನು ಪೂರೈಸಲು ಪ್ರತಿ ಊರು, ಗ್ರಾಮಗಳಲ್ಲಿ ರಾಷ್ಟ್ರೀಯ ಬಸವ ದಳವನ್ನು ತೆರೆಯಿರಿ. ಅರ್ಜಿಪತ್ರ ತೆಗೆದುಕೊಂಡು ತುಂಬಿ, ಕಾರ್ಯಕಾರಿ ಸಮಿತಿ ರಚಿಸಿ, 55 ರೂ ಕೊಟ್ಟು ನೋಂದಾಯಿಸಿ ಮಾನ್ಯತೆ ಪಡೆದು ನಿಮ್ಮ ಊರುಗಳಲ್ಲಿ ವಾರದ ಪ್ರಾರ್ಥನೆ, ಶರಣರ ಜಯಂತಿ ಆಚರಣೆ ಮುಂತಾಗಿ ಮಾಡಿರಿ.

ಈ ಸಂಘಟನೆಯ ಧ್ಯೇಯ ಜಾತಿವರ್ಣವರ್ಗರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣ. ಇದರ ಕೆಲವು ಸೂತ್ರಗಳು ಹೀಗಿವೆ :

ಧರ್ಮಬೇಕು, ಜಾತಿಬೇಡ
ದೇವರು ಬೇಕು, ಮೂಢನಂಬಿಕೆ ಬೇಡ
ಗುರುಬೇಕು, ಪುರೋಹಿತಶಾಹಿ ಬೇಡ
ಧರ್ಮಾಭಿಮಾನ ಬೇಕು, ಮತಾಂಧತೆ ಬೇಡ
ವೈಚಾರಿಕತೆ ಬೇಕು, ನಾಸ್ತಿಕತೆ ಬೇಡ
ವಿನಯಬೇಕು, ಹೇಡಿತನ ಬೇಡ.

ದೇವನೊಬ್ಬನೆ ತಂದೆ, ಮನುಜರೆಲ್ಲರು ಒಂದೆ
ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ
ಕುಲತನ ಇರುವುದು ಜಾತಿಯಲ್ಲಲ್ಲ, ಗುಣ ನಡತೆಗಳಲ್ಲಿ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು

## ಘೋಷಣೆಗಳು

ಭಾರತ ದೇಶ. ಜೈ ಬಸವೇಶ
ಬಸವ ದಳದ ವೀರ, ಹಿಮ್ಮೆಟ್ಟದ ಧೀರ
ಬಸವದಳದ ವ್ಯಕ್ತಿ, ದೇಶಕ್ಕೊಂದು ಶಕ್ತಿ
ಬಸವ ದಳದ ಶರಣ, ದೇಶದ ಆಶಾಕಿರಣ
ಕಟ್ಟುವೆವು ನಾವ್ ಕಟ್ಟುವೆವು
ಕಲ್ಯಾಣರಾಜ್ಯವ ಕಟ್ಟುವೆವು.

## ಬಸವ ಭಕ್ತರ ಪ್ರತಿಜ್ಞೆ

ಬಸವ ಭಕ್ತರು ನಾವು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು || ಪ ||

"ಧರ್ಮಗುರು ಬಸವಣ್ಣ" ಎಂದು ಸಾರಿ ನುಡಿವೆವು
"ವಚನ ಶಾಸ್ತ್ರ ಸಂವಿಧಾನ" ಎಂದು ತಿಳಿದು ನಡೆವೆವು
"ಇಷ್ಟಲಿಂಗ ದೇವಕುರುಹು" ಎಂದು ನಂಬಿ ಪೂಜಿಪೆವು
"ಸಂಗಮವು ಧರ್ಮಕ್ಷೇತ್ರ" ಎಂದು ತಿಳಿದು ಬರುವೆವು. || ೧ ||

"ಷಟ್ಕೋನ ಬಸವ ಧ್ವಜವ" ಹಿಗ್ಗಿನಿಂದ ಹಾರಿಪೆವು
"ಕಲ್ಯಾಣ ರಾಜ್ಯ" ಕಟ್ಟುವ ಧ್ಯೇಯವಿಟ್ಟು ದುಡಿವೆವು
"ಶರಣ ಮೇಳ"ದಲ್ಲಿ ಕೂಡಿ, ಹಾಡಿ ಪಾಡಿ ನಲಿವೆವು
"ಬಸವ ಧರ್ಮಪೀಠ"ದ ಆದೇಶದಂತೆ ನಡೆವೆವು || ೨ ||

"ಅಷ್ಟಾವರಣ" ಅಂಗವೆಂದು ನಾವು ನಿತ್ಯ ಧರಿಪೆವು
"ಪಂಚಾಚಾರ" ಪ್ರಾಣವೆಂದು ಅನುಷ್ಠಾನ ಗೈವೆವು
"ಷಟಸ್ಥಲ" ಶಿವಪಥದಿ ಶ್ರದ್ಧೆಯಿಂದ ಸಾಗುವೆವು
"ಗುರುಬಸವ" ತಂದೆಯು ಮೆಚ್ಚುವಂತೆ ಬಾಳುವೆವು || ೩ ||

"ಜಾತಿವಾದ" ಮನುಜಗೈದ ತಂತ್ರವೆಂದು ಸಾರುವೆವು
"ನೀತಿಸಿರಿಯು" ಒಂದೆ ಶ್ರೇಷ್ಠ ಸೂತ್ರವೆಂದು ತಿಳಿವೆವು
"ದೇವನೊಬ್ಬ" ನಮ್ಮ ತಂದೆ ಮನುಜರೆಲ್ಲರೊಂದೆ ಎಂದು
"ವಿಶ್ವಸೋದರತ್ವ" ಸಾರಿ ಕಲ್ಯಾಣರಾಜ್ಯ ಕಟ್ಟುವೆವು || ೪ ||

— ಜಗದ್ಗುರು ಮಾತೆ ಮಹಾದೇವಿ

[ಬಸವ ತತ್ತ್ವಾನುಯಾಯಿಯ ಜೀವನದ ನಂಬಿಕೆ ಆಚರಣೆ ಹೇಗಿರಬೇಕೆಂಬುದನ್ನು ತಿಳಿಸುವ ಈ ಪದ್ಯವನ್ನು ಮನನ ಮಾಡಬೇಕು, ಕಲಿಯಬೇಕು.]